ವರ್ಷಾಂತ್ಯವಾದುದರಿಂದ ನಿತ್ಯದಂತೆ ಜುಲ್ಯೈ ಸಂಚಿಕೆಯನ್ನು ನಿಲ್ಲಿಸಿಯದೆ. ಅಗೋಸ್ತು ತಿಂಗಳಿನಿಂದ ಮೂರನೇ ವರ್ಷಾರಂಭ

"Service of the Poor is the Service of God"

ಬಡವರಬಂಧು

ಮಂಗಳೂರು.

BADAVARA BANDHU
OR
THE FRIEND OF THE POOR
MANGALORE.

A HIGH CLASS CANARESE MONTHLY.

Editor: Mangalore Jarappa   Associate Editor: B. Narsappa.

ಪುಷ್ಪ ೨   ಎಸಳು ೧೧.

JUNE, 1934.

ವಾರ್ಷಿಕ ಚಂದಾ—ಪರ ಊರವರಿಗೆ ರೂ. 1—4—0.
" " — ಊರವರಿಗೆ ರೂ. 1—0—0.
ಈ ಸಂಚಿಕೆಯ ಬೆಲೆ: 0—1—6.

ಯಾವ ಕಾಲದ ಶಾಸ್ತ್ರವೇನು ಹೇಳಿದರೇನು?

ಯಾವ ಕಾಲದ ಶಾಸ್ತ್ರವೇನು ಹೇಳಿದರೇನು?
ಎದೆಯ ದನಿಗೂ ಮಿಗಲು ಶಾಸ್ತ್ರವಿಹುದೇನು!
ಎಂದೊ ಮನು ಬರೆದಿಟ್ಟುದಿಂದೆಮಗೆ ಕಟ್ಟೇನು?
ನಿನ್ನೆದೆಯ ದನಿಯೆ ಋಷಿ! ಮನು ನಿನಗೆ ನೀನು!
ನೀರಡಿಸಿ ಬಂದ ಸೋದರಗೆ ನೀರನು ಕೊಡಲು
ಮನು ಧರ್ಮಶಾಸ್ತ್ರವೆನಗೊರೆಯ ಬೇಕೇನು?
ನೊಂದವರ ಕಂಬನಿಯನೊರಸಿ ಸಂತೈಸಿವೊಡೆ
ಶಾಸ್ತ್ರಪ್ರಮಾಣವದಕಿರಲೆ ಬೇಕೇನು?
ಪಂಚಮರ ಶಿಶುವೊಂದು ಕೆರೆಯಲ್ಲಿ ಮುಳುಗುತಿರೆ
ದಡದಲ್ಲಿ ಮಿಡಿಯುತ್ತ ನಿಂತಿರುವ ನಾನು
ಮುಟ್ಟಿದರೆ ಬ್ರಹ್ಮತ್ವ ಕೆಟ್ಟುಹೋಗುವುದೆಂದು
ಸುಮ್ಮನಿದ್ದರೆ ಶಾಸ್ತ್ರಸಮ್ಮತವಹುದೇನು?

ಅಂತು ಮನು ತಾನು ಹೇಳಿರಲಾರನಯ್ಯಯ್ಯೊ
ಹೇಳಿದ್ದರವನನೂ ಶಾಸ್ತ್ರದೊಳೆ ಸುತ್ತಿ,
ಸ್ವರ್ಗ ಹೋಗಲಿ ಮತ್ತೆ ನರಕ ಬಂದರು ಬರಲಿ,
ಎದೆಯ ಧೈರ್ಯವಮಾಡಿ ಬಿಸಾಡಾಚೆಗೆತ್ತಿ!
ಸ್ವರ್ಗ ಹೋಗುವುದಿಲ್ಲ, ನರಕ ಬರುವುದು ಇಲ್ಲ;
ಸ್ವರ್ಗ ನರಕಗಳೇನು ಶಾಸ್ತ್ರಸ್ಥವಲ್ಲ,
ಎದೆಯುದನಿ ಧರ್ಮನಿಧಿ! ಕರ್ತವ್ಯವದುವೆ ವಿಧಿ!
ನಂಬದನು; ಅದನುಳಿದು ಋಷಿಯು ಬೇರಿಲ್ಲ!
ಹಿಂದಿನಾ ಋಷಿಗಳೂ ಮಾನವರೆ ನಮ್ಮಂತೆ,
ಅವರ ಶಾಸ್ತ್ರವು ಅವರ ಕಾಲಕ್ಕೆ ಮಾತ್ರ;
ಕಾಲಕ್ಕೆ ತಕ್ಕಂತೆ, ದೇಶಕ್ಕೆ ತಕ್ಕಂತೆ,
ನಮ್ಮ ಹೃದಯವೆ ನಮಗೆ ವರಧರ್ಮಸೂತ್ರ

("ಕಾವ್ಯ ಸಾಮ್ರಾಜ್ಯ"ದ ವಿಮರ್ಶೆ ನೋಡುವುದು ಸಂ.)

ಕೆ. ವಿ. ಪುಟ್ಟಪ್ಪ.

ಅನುಭವಸಿದ್ಧ ಔಷಧಗಳು.

ಧಾತುಪುಷ್ಟಿ ಲೇಹ—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕ ಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ಥಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಬಚ್ಚುವುದು ಮೊದಲಾದುವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.

ಡಬ್ಬಿ ೧ಕ್ಕೆ ರೂ. ೨-೮-೦. ೨ಕ್ಕೆ ೪-೧೨-೦.

ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಮುಟ್ಟಿನ ದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆ ನೋವು, ಸೊಂಟನೋವು, ಸಂತಾನ ಹೀನತೆ, ಮೂರ್ಛೆ, ಮಲಬದ್ಧತೆ, ಚಳಿಜ್ವರ, ರಕ್ತಹೀನತೆ, ಕೈಕಾಲು ಸೆಳಿತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಗುಣ ಪಡಿಸುವುದು.

ಬಾಟ್ಲಿ ೧ರ ೧-೨-೦; ೧ ಡಬ್ಬಿ ಮಾತ್ರೆಗೆ ೧-೦-೦; ೨ ಬಾಟ್ಲಿ ಔಷಧಕ್ಕೂ ೨ ಡಬ್ಬಿ ಮಾತ್ರೆಗೂ ೪-೪-೦.

(ಕಸ್ತೂರಿಮಿಶ್ರಣ) ದಶಮೂಲಾರಿಷ್ಟ—ಹೆಂಗಸರು ಪ್ರಸವಿಸಿದ ನಂತರ ಅವರ ಗರ್ಭಕೋಶಗಳನ್ನು ಅಕುಂಚಿಸಿ ಪ್ರಸವದ ಆಯಾಸವನ್ನು ಹೋಗಲಾಡಿಸಿ, ಗರ್ಭಕೋಶದಲ್ಲಿ ಕೆಡುಕು ರಕ್ತವು ನಿಲ್ಲದಂತೆ ಮಾಡಿ, ಗರ್ಭಕೋಶದ ವೇದನೆಗಳನ್ನು ಸಮಾಧಾನ ಪಡಿಸಿ, ಬಾಣಂತಿಯರ ಅರುಚಿ, ಅಗ್ನಿಮಾಂದ್ಯ ನಿದ್ರಾಭಂಗ ಮೊದಲಾದವುಗಳು ಮಾಯವಾಗಿ ಬಾಣಂತಿಯರು ಪುಷ್ಟಿ ಹೊಂದುವರು. ಮಗುವಿನ ಆರೋಗ್ಯವು ನಿರಾಂತಕವಾಗುವುದು. ಪ್ರಸವಿಸಿದ ತರುವಾಯ ೩ ದಿನಗಳ ಮಾತ್ರೆಗೆ ಆ. ೩; ದಶಮೂಲ ಬೆಲೆ ಬಾಟ್ಲಿ ೧ರ ರೂ. ೧-೮-೦; ೨ ಬಾಟ್ಲಿಗಳಿಗೆ ರೂ ೩.

ಮೇಹ ಕುಠಾರ—ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರ ಆಗಾಗ್ಗೆ ಬಂದು ತಡಿಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ.

೧ ಡಬ್ಬಿ ಮಾತ್ರೆಗೆ ರೂ. ೨-೮-೦; ೨ ಡಬ್ಬಿಗಳಿಗೆ ರೂ. ೪-೧೨-೦.

ದ್ರಾಕ್ಷಾರಿಷ್ಟ—ಮೆದುಳಿಗೂ, ನರಗಳಿಗೂ ನವಶಕ್ತಿಯನ್ನುಂಟು ಮಾಡುವ ಅತ್ಯುತ್ತಮ ಔಷಧಿ ಅತಿರೇಕ ದೌರ್ಬಲ್ಯದಿಂದ ಉಂಟಾಗುವ ಎಂತಹ ತೀಕ್ಷ್ಣ ವ್ಯಾಧಿಯ ಸಮಯದಲ್ಲಿಯೂ ಶಕ್ತಿಯನ್ನು ಇರಗೊಳಿಸುವುದು ರಕ್ತಹೀನತೆ ಮೊದಲಾದುವುಗಳನ್ನು ನಿವಾರಿಸುವುದು. ದೇಹದಲ್ಲಿ ತಲೆದೋರುವ ಸರ್ವ ತರದ ನರಗಳ ಯಾ ನೈಸರ್ಗಿಕ ದೌರ್ಬಲ್ಯಗಳನ್ನು ಹೋಗಲಾಡಿಸುವುದು. ಕೆಮ್ಮು, ನಿದ್ರಾಹೀನತೆ ಮೊದಲಾದುವುಗಳಿಗೂ ಅತ್ಯುತ್ತಮ. ತಲೆತಿರುಗುವಿಕೆ, ಪಿತ್ತವಿಕಾರ, ಮಲಬದ್ಧತೆ, ಅಜೀರ್ಣತೆ ಇತ್ಯಾದಿಗಳನ್ನು ಹೋಗಲಾಡಿಸಿ, ರಕ್ತಶುದ್ಧಿಯನ್ನೂ, ವೃದ್ಧಿಯನ್ನೂ ಉಂಟುಮಾಡಿ, ಹಸಿವನ್ನು ಹೆಚ್ಚಿಸಿ, ಮಲವಿಸರ್ಜನೆಯನ್ನು ಕ್ರಮಗೊಳಿಸುವುದು. ಇದನ್ನು ರೋಗಿಗಳು ಮಾತ್ರವಲ್ಲದೆ ನಿರೋಗಿಗಳೂ ಸೇವಿಸುವುದರಿಂದ ಅವರ ಆರೋಗ್ಯವು ದ್ವಿಗುಣಿತವಾಗಿ ಬೆಳೆದು ಶಕ್ತಿಯು ಹೆಚ್ಚುವುದು. ಮಕ್ಕಳಿಗೂ ಇದು ಶಕ್ತಿವರ್ಧಕವು. ಕ್ರಯ 24 ಔನ್ಸಿನ ಬಾಟ್ಲಿಗೆ ರೂ. 2—4—0.

ಮಹಾಮದನಕಾಮೇಶ್ವರೀ ಲೇಹ— ಡಬ್ಬಿ ೧ರ ರೂ. ೨— —೦. ೨ರ ರೂ. ೩ ೧೨ ೦.

ಕೆಟಲಾಗಿಗೆ ಬರೆಯಿರಿ: **ಎಂ. ಗಣಪಯ್ಯ ಎಂಡ್ ಸನ್ಸ್.** ಆಯುರ್ವೇದಿಕ್ ಫಿಜಿಶಿಯನ್ಸ್ **ರಥಬೀದಿ, ಮಂಗಳೂರು**

ನಮ್ಮಲ್ಲಿಯ ಔಷಧಗಳು ಈ ಕೆಳಗಿನ ವಿಳಾಸದವರಲ್ಲಿಯೂ ದೊರೆಯುತ್ತವೆ.

ಕಾಮತ್ ಎಂಡ್ ಕೋ. ತಾರಾಹೌಸ್, ಗಿರಗಾಂವ್ ಬೇಕ್ ರೋಡ್, ಮುಂಬಾಯಿ ನಂ. 4 **ಡಾ। ಶ್ರೀನಿವಾಸ ಪೈ,** ಪುತ್ತೂರು, ದ. ಕ.

DENTISTRY.

Your teeth are more valuable than

Rs. 1,00,000



To keep your teeth always healthy, why dont you consult an experienced wellknown

Dental Surgeon

Dr. U. K. Rau,

Maidan Road, **MANGALORE.**

Because he is the only Dentist who has studied Medicine as well as Dentistry.

CHARGES MODERATE.

ತೊದಲ್ನುಡಿ.

ಮುಂಬಾಯಿಯಲ್ಲಿ ಏಕಮಾತ್ರ

ವಾರ ಪತ್ರಿಕೆ

ಕಥೆ, ಪದ್ಯ, ಹಾಸ್ಯ, ವಾರ್ತಾ ವಿನೋದಗಳೇ ಮೊದಲಾದ ವಾಚನೀಯ ಲೇಖನಗಳಿಂದೊಪ್ಪುವ ವಾರ ಪತ್ರಿಕೆ ಎಂದರೆ ಇದೊಂದೇ. ಪುಸ್ತಕ ರೂಪದಲ್ಲಿ ವಾರಂಪ್ರತಿ ಹೊರಡುತ್ತದೆ.

ಚಂದಾ:—ವರ್ಷ 1ಕ್ಕೆ ರೂ. 3—4—0. 6 ತಿಂಗಳಿಗೆ ರೂ. 1—12—0. 4 ತಿಂಗಳಿಗೆ ವಿದ್ಯಾರ್ಥಿಗಳಿಗೆ ಮಾತ್ರ ರೂ. 1—4—0.

ಕೂಡಲೇ ಬರೆಯಿರಿ:—

ತೊದಲ್ನುಡಿ ಆಫೀಸು,

140 Bora Bazaar Street, **Fort, BOMBAY.**

ಬಡವರಬಂಧು

"BADAVARA BANDHU"

ಸಂಪುಟ 2.	ಜೂನ್, 1934.	ಸಂಚಿಕೆ 12.

ದೀನಗಿಂತ ದೇವ ಬಡವ

ಶ್ರೀ. ದಿನಕರ ದೇಸಾಯಿಯವರು, ಎಂ. ಎ. ಅಂಕೋಲ

ಹರಿಗೆ ಎಂದು ಗುಡಿಯನೊಂದು
ಕಟ್ಟುತ್ತಿರುವೆಯಾ!
ಹರಿಯ ಒಲುಮೆ ಪಡೆದು ಪುಣ್ಯ
ಗಳಿಸುತಿರುವೆಯಾ!
ಮರಳಿ ನೀನು ಹಳ್ಳಿಗೋಡು,
ದೀನ ಜನರ ಪಾಡ ನೋಡು,
ಇರಲು ಗುಡಿಯು ಇಲ್ಲವಲ್ಲ,
ಹೊಟ್ಟೆ ತುಂಬ ಅನ್ನವಿಲ್ಲ,
ಹರಿಗೆ ಎಂದು ಗುಡಿಯು ನೊಂದು
ಕಟ್ಟುತ್ತಿರುವೆಯಾ!
ಹರಿಯ ವಿಶ್ವರೂಪವನ್ನು
ಮರೆತು ಬಿಟ್ಟೆಯಾ!
ಜಗಕೆ ಗೋಡೆ ಹಾಕಿ ಗುಡಿಯು,
ಕಟ್ಟಬಲ್ಲೆಯಾ!
ದೀನಗೊಂದು ಗೂಡು ಸಾಕು,
ದೇವಗೊಂದು ವಿಶ್ವಬೇಕು,
ಮಣ್ಣು, ಹುಲ್ಲು, ಸಣ್ಣ ಓಡು,
ಬಡವಗದುವೆ ಚೆನ್ನ ಗೂಡು,
ಹರಿಗೆ ಎಂದು ಗುಡಿಯನೊಂದು
ಕಟ್ಟುತ್ತಿರುವೆಯಾ!
ದೀನಗಿಂತ ದೇವ ಬಡವ—
ನೆಂದು ಬಗೆದೆಯಾ!

(ವಿಮರ್ಶೆಯ ಪುಟ ನೋಡುವುದು.)

ಭಾರತೀಯ ನಿರುದ್ಯೋಗದ ಸಮಸ್ಯೆ.

ಲೇಖಕರು:—ಶ್ರೀ ಪಂಡಿತ ತಾರಾನಾಥರು, ಪ್ರೇಮಾಯಾತನ, ತುಂಗಭದ್ರೆ.

ನಿರುದ್ಯೋಗದ ಹಾವಳಿಯು ಎಲ್ಲ ಕಡೆಯೂ ಹಬ್ಬಿದೆ ಎಂಬುದನ್ನು ಮತ್ತೆ ಹೇಳಬೇಕಾಗಿಲ್ಲ. ಜಗತ್ತಿನ ವ್ಯಾಪಾರವೆಲ್ಲ ಅಸ್ತವ್ಯಸ್ತವಾಗಿರುವುದು ಅದಕ್ಕೊಂದು ಕಾರಣವೆಂಬದೇನೊ ನಿಜ. ಆದರೆ ಅದೊಂದೇ ಕಾರಣವೆಂದು ಹೇಳಲಿಕ್ಕೂ ಆಗುವುದಿಲ್ಲ. ಶಾಲೆ ಕಾಲೆಜ್‌ಗಳಲ್ಲಿ ಓದಿ ಹೊರಟವರು ಹೆಚ್ಚಾಗಿ ಹುಡುಕುವುದು ಸರಕಾರಿ ಕೆಲಸ. ಅಲ್ಲಿ ಇವರಿಗೆ ಜಾಗೆಯಿಲ್ಲ. ಇದ್ದರೂ, ಯೋಗ್ಯತೆಗಿಂತ ಅರ್ಜಿಗಾರರ ಜಾತಿ ಮತಕ್ಕೇ ಪ್ರಾಮುಖ್ಯತೆ ಹೆಚ್ಚು ಎಷ್ಟೋ ಕಡೆ! ವ್ಯಾಪಾರಿ ಕೆಲಸಕ್ಕೆ ಇವರು ಹೋಗುವುದು ಮೊದಲೇ ಕಡಿಮೆ. ಹಾಗೆ ಹೋಗಬೇಕೆಂದಿದ್ದರೂ ವ್ಯಾಪಾರಕ್ಕೇ ರಾಹುಬಡೆದಿದೆ.

ಇನ್ನೊಂದು ಹಾದಿಯೆಂದರೆ ತಮ್ಮ ಜನರ ಸೇವೆಯನ್ನು ತಾವೇ ಸ್ವತಂತ್ರರಾಗಿ ಮಾಡಿ ಸೇವೆಗೆ ತಕ್ಕ ವರಮಾನದಿಂದ ಬದುಕುವುದು. ಈ ಹಾದಿಯನ್ನು ತುಳಿಯುವವರು ನಮ್ಮಲ್ಲಿ ಬಹಳ ಅಪರೂಪ. ಅವರ ಪೈಕಿ ಇರುವವರು ಹೆಚ್ಚು ಅಂದರೆ ವಕೀಲರು ಮತ್ತು ಡಾಕ್ಟರರು. ಇವರಿಗೆ ಪಟ್ಟಣಗಳನ್ನು ಬಿಟ್ಟರೆ ಬೇರೆ ಗತಿಯಿಲ್ಲ. ಆದರೆ ಇವರ ಸಂಖ್ಯೆಯು ಬೆಳೆಯುತ್ತ ಹೋದಂತೆ ಪಟ್ಟಣಗಳ ಸಂಪತ್ತಿಯು ಇತ್ತೀಚೆಗೆ ಇಳಿಯುತ್ತಿದೆ! ಡಾಕ್ಟರರ ಸಂಪಾದನೆ ಹೆಚ್ಚಾಗಿ ವಕೀಲರನ್ನೂ ವರ್ತಕರನ್ನೂ ಅವಲಂಬಿಸಿಕೊಂಡಿದೆ. ಇವರ ಸಂಪಾದನೆಯೋ, ಹಳ್ಳಿಯವರ ಸ್ಥಿತಿಗಳನ್ನು ಅವಲಂಬಿಸಿಕೊಂಡಿದೆ.

ಹಳ್ಳಿಯವರ ಅಭಿವೃದ್ಧಿಗೆ ಅವರ ಬೇಸಾಯ ಕಸಬುಗಳ ಸುಸ್ಥಿತಿಯೇ ಕಾರಣ. ಇವುಗಳಿಗೆ ಅವರ ಆರೋಗ್ಯ ಸುಶಿಕ್ಷಣಗಳೊಂದು ಕಾರಣ. ಬೇಸಾಯ ಕಸಬುಗಳಿಂದ ಉಂಟಾದ ಧಾನ್ಯವಸ್ತುಗಳು ಚೆನ್ನಾಗಿ ಮಾರಾಟವಾಗುವುದು ಇನ್ನೊಂದು ಕಾರಣ. ಮೊದಲನೆಯದು ಹಳ್ಳಿಗಳನ್ನೇ ಅವಲಂಬಿಸಿಕೊಂಡಿದೆ. ಎರಡನೆದು ಜಗತ್ತಿನ ಮಾರ್ಕೆಟ್‌ಗಳನ್ನು ಅವಲಂಬಿಸಿಕೊಂಡಿದೆ. ಹತ್ತಿ, ನೆಲಗಡಲೆಗಳ ಬೆಲೆಯು ಜಪಾನ್, ಇಂಗ್ಲಂಡ್ ಮುಂತಾದ ದೇಶಗಳ ವ್ಯಾಪಾರವನ್ನವಲಂಬಿಸಿಕೊಂಡಿದ್ದು, ಅದರಂತೆ ಏರುತ್ತ ಇಳಿಯುತ್ತ ಹೋಗುವುದು ಸಾಮಾನ್ಯವಾಗಿ ತಿಳಿದಿರುವ ವಿಷಯ. ಇತರ ಸಾಮುಗ್ರಿಗಳ ಬೆಲೆಯು ಮುಖ್ಯವಾಗಿ ಇವುಗಳ ಏರಿಳಿತವನ್ನೇ ಅನುಸರಿಸಿಕೊಂಡು ಹೋಗುತ್ತದೆ. ಈ ಭಾಗವನ್ನು ಒಕ್ಕಲಿಗರಿಗೆ ಅನುಕೂಲವಾಗುವಂತೆ ಸರಿಪಡಿಸುವುದು ಒಕ್ಕಲಿಗರೊಬ್ಬರ ಕೈಯಲ್ಲಿಯೇ ಇಲ್ಲ. ಪರಸ್ಪರ ವ್ಯಾಪಾರವನ್ನು ನಡೆಸುವ ರಾಷ್ಟ್ರಗಳ, ಅಷ್ಟೇ ಏಕೆ, ಸಕಲ ರಾಷ್ಟ್ರಗಳ ಸಹಾನುಭೂತಿ ಸಹಕಾರಗಳಿಂದಲೇ ಯೋಗ್ಯವಾದ ಆರ್ಥಿಕ ತಿದ್ದು ಪಡೆಯಾಗತಕ್ಕದು. ಅದೇನು ಸುಲಭವೋ? ಅದಕ್ಕೆ ಬೇಕಾದ ವಿಚಾರ, ಪ್ರಚಾರ, ಸಮಯಗಳೇನು ಸ್ವಲ್ಪವೋ? ಅದಕ್ಕಾಗಿ ಪ್ರಯತ್ನಗಳೇನೋ ಅಲ್ಪಸ್ವಲ್ಪ ನಡೆಯುತ್ತಿವೆ. ಅಂತರ್ಜಾತಿಯ ಸಹಕಾರದಿಂದಲೇ ಪ್ರತಿಯೊಂದು ದೇಶದ ಉದ್ಧಾರವಾಗುವುದು ಸಾಧ್ಯ ಎಂಬ ಎಚ್ಚರಿಕೆಯು ಮಾತ್ರ ಎಲ್ಲ ದೇಶಗಳಲ್ಲಿಯೂ ಉಂಟಾಗಿ ದಿನೇ ದಿನೇ ಹೆಚ್ಚುತ್ತಲಿದೆ. ಆದರೂ ಮುಂದಾಳುಗಳಿಗಿರುವ ಧ್ಯೇಯಗಳು ಕೈಗೂಡಲಿಕ್ಕೆ ಇನ್ನೂ ಎಷ್ಟೋ ವರ್ಷಗಳು ಬೇಕು. ಈ ಅವಶ್ಯಕ ಚಳವಳಿಯು ಬೆಳೆಯಬೇಕಾದರೂ ಜಗತ್ತಿನ ಸಂಪತ್ತಿಗೆ ಮೂಲಾಧಾರವಾದ ರೈತರಲ್ಲಿಯೂ ಕೂಲಿಗಾರರಲ್ಲಿಯೂ ಎಚ್ಚರಿಕೆಯುಂಟಾಗಬೇಕು. ಅವರು 'ಬಂದಷ್ಟು ಬೊಮ್ಮನದಯೆ' ಎಂದು ಧನಾಢ್ಯ ಯಜಮಾನರ ಕೈನೆಕ್ಕುತ್ತ ಕೂತಿರುವ ವರೆಗೆ ಜಗತ್ತಿನ ಆರ್ಥಿಕ ಅವ್ಯವಸ್ಥೆ, ಅದರಿಂದ ಉಂಟಾಗುವ ದುರ್ಭಿಕ್ಷ, ದುಃಸ್ಥಿತಿ ಮುಂತಾದವುಗಳು ಎಂದಿಗೂ ಹೋಗಲಾರವು. ಹಲಕೆಲವು ಧನಪ್ರಿಯ ಕೋಟ್ಯಾಧೀಶ್ವರರು ಅಡ್ಡಕಾಲು ಹಾಕುವುದರಿಂದಲೇ ಈ ಅಂತರ್ಜಾತೀಯ ಆರ್ಥಿಕೋದ್ಧಾರವು ಬೀಳುತ್ತ ಏಳುತ್ತ ಮೆಲ್ಲ ಮೆಲ್ಲಗೆ ಸಾಗುತ್ತಿದೆ. ಆದರೆ ಈ ಕೇವಲ ಸ್ವಾರ್ಥಪರ ಕೋಟ್ಯಾಧೀಶರ ಬಲಕ್ಕೆ ರೈತರ ಕೂಲಿಗಾರರ ಅಶಿಕ್ಷಿತಾವಸ್ಥೆಯೇ ಕಾರಣವೆಂಬುದು ಎಲ್ಲರಿಗೂ ತಿಳಿದುಬಂದಿದೆ. ಅವರಿಗಂತೂ ಚೆನ್ನಾಗಿ ಗೊತ್ತು. ಅದಕ್ಕಾಗಿಯೇ ಅವರು ರೈತರಿಗೆ, ಕೂಲಿಗಾರರಿಗೆ ಎರಡು ಕಾಸಾದರೂ ಹೆಚ್ಚು ಕೊಟ್ಟಾರೆಯೇ ಹೊರತು, ಎರಡು ನ್ಯಾಯವಾದ ಸ್ವತಂತ್ರವಾದ ವಿಚಾರ

ಗಳನ್ನು ಹೇಳಲಿಕ್ಕೆ ಹೋಗರು. ಅವುಗಳನ್ನು ಕಿವಿಗೆ ಸಹ ಬೀಳಗೊಡಬಾರದು ಎಂಬದಕ್ಕೆ ಅಲ್ಲವೆ ಮುಸೋಲನಿ, ಹಿಟ್ಲರ್, ಡೋಲ್ಫಸ್ ಮುಂತಾದವರ ಹೊಸ ರಾಜ್ಯಗಳ ವ್ಯವಸ್ಥೆ?

ಸಾರಾಂಶವೇನು? ವಿಶಾಲ ದೃಷ್ಟಿಯಿಂದ ನೋಡಿದರೆ ಜಗತ್ತಿನ ಆರ್ಥಿಕ ಸ್ಥಿತಿಯು ತಿದ್ದುಪಡಿಯಾಗಿ ಎಲ್ಲ ಕಡೆಯೂ ಸುಖ ಸುಭಿಕ್ಷಗಳು ಹಬ್ಬಬೇಕಾದರೆ ಆ **ಧನವನ್ನು ನಿಜವಾಗಿಯೂ ಹುಟ್ಟಿಸುವ ರೈತರಿಗೆ, ಕೂಲಿಕಾರರಿಗೆ ಯೋಗ್ಯ ಶಿಕ್ಷಣವಾಗಬೇಕು.** ತಮ್ಮ ಹಕ್ಕುಗಳಾವುವು ಎಂಬದನ್ನು ತಿಳಕೊಳ್ಳುವ ಯೋಗ್ಯತೆ ಅವರಿಗೆ ಬರಬೇಕು. ಅವುಗಳನ್ನು ಸಡಿಲು ಬಿಡದೆ ಸಾಧಿಸಿಕೊಳ್ಳುವ ಒಕ್ಕಟ್ಟು, ಆರೋಗ್ಯಗಳು ಅವರಿಗೆ ಬರಬೇಕು. ಇದಕ್ಕಾಗಿಯೇ ಜಗತ್ತಿನಲ್ಲೆಲ್ಲಾ 'ಲೇಬರ್ ಮೂವ್ಮೆಂಟ್'ಗಳು ಉಂಟಾಗಿ ಬೆಳೆಯುತ್ತಿವೆ. (ಅವುಗಳಲ್ಲಿ ಶಕ್ತಿಯಿದೆಯೆಂದೇ ಮುಸೋಲಿನಿ, ಹಿಟ್ಲರ್, ಡೋಲ್ಫಸ್ ಮುಂತಾದ 'ಫೆಸಿಸ್ಟ'ರು ಅವುಗಳನ್ನು ತಮ್ಮಲ್ಲಿ ತಲೆಯೆತ್ತಗೊಡುವುದಿಲ್ಲ.)

ಆದರೆ ಇಂಡಿಯದ ಸ್ಥಿತಿಯು ಇತರ ದೇಶಗಳ ಸ್ಥಿತಿಯಂತಿಲ್ಲ. ಅಲ್ಲಿ ಉದ್ಯಮಗಳು ಹೆಚ್ಚು, ಇಲ್ಲಿ ಬೇಸಾಯ ಹೆಚ್ಚು. ಅಲ್ಲಿ ಕೂಲಿಗಾರರು ಹೆಚ್ಚು, ಇಲ್ಲಿ ರೈತರು ಹೆಚ್ಚು. ಅಲ್ಲಿ ಪಟ್ಟಣಗಳು ಹೆಚ್ಚು, ಇಲ್ಲಿ ಹಳ್ಳಿಗಳು ಹೆಚ್ಚು. ೧೦೦ಕ್ಕೆ ೮೬ರಷ್ಟು ಮಂದಿ ನಮ್ಮಲ್ಲಿ ಹಳ್ಳಿಗಳಲ್ಲಿರುತ್ತಾರೆ. ಹೀಗಿರುತ್ತ ಪಟ್ಟಣಗಳಲ್ಲಿ ನಡೆಯುವ ಚಳವಳಿಗಳ ಗಾಳಿ ಸಹ ಈ ನಿರಕ್ಷರ ಹಳ್ಳಿಗಳ ಕಡೆಗೆ ಬೀಸುವುದಿಲ್ಲ! ಈ ಹಳ್ಳಿಗಳಲ್ಲಿಯೇ ಬೇಕಾದ ಎಚ್ಚರಿಕೆಯುಂಟಾಗಬೇಕು. ಈ ಹಳ್ಳಿಗಳಲ್ಲಾದ ಉದ್ಧಾರವೇ ಭಾರತದ ನಿಜವಾದ ಉದ್ಧಾರ. ಇಲ್ಲಾದ ಎಚ್ಚರಿಕೆಯೇ ಇಂಡಿಯದ ನಿಜವಾದ ಎಚ್ಚರಿಕೆ.

ಈ ಹಳ್ಳಿಗಳು ಹೆಚ್ಚು ಕಡಿಮೆ ಏಳು ಲಕ್ಷ ಇವೆ. ನಿಜವಾದ ದೇಶಾಭಿಮಾನ ಉಳ್ಳವರಿಗೆ **ಉದ್ಯೋಗದ ಹಾದಿಯು ಇಲ್ಲಿ ತೆರದೇ ಇದೆ.** ಹಳ್ಳಿಗೊಬ್ಬನಂತೆ ದುಡಿದರೆ ಏಳು ಲಕ್ಷ ಸುಶಿಕ್ಷಿತ ಯುವಕರಿಗೆ ಉದ್ಯೋಗ ವಿಶಾಸ ಲಿಟ್ಟಂತಿದೆ. ಆದರೆ ಸರಕಾರಿ ಶಾಲೆ ಕಾಲೆಜ್‌ಗಳಲ್ಲಿ ಕಲಿತವರಿಗೆ ಈ ಗೊಡವೆಯೇ ಇಲ್ಲ! ಇದ್ದರೂ ಹಳ್ಳಿಗಳಲ್ಲಿ ದುಡಿದುಕೊಂಡು ಹೊಟ್ಟೆ ತುಂಬಿಕೊಳ್ಳುವ ಯೋಗ್ಯತೆಯಿಲ್ಲ. ಇವರಿಗೆ ಪಟ್ಟಣಗಳೇ ಬೇಕು, ಆದರೆ ಪಟ್ಟಣಗಳಿಗೆ ಇವರು ಬೇಡ! ಹಳ್ಳಿಯಲ್ಲಿ ದುಡಿಯುವವನಿಗೆ ಆ ಹಳ್ಳಿಯಿಂದಲೇ ಧಾರಾಳವಾಗಿ ಅನ್ನ ಬಟ್ಟೆ, ಸುಖ ಸೌಕರ್ಯಗಳು ಲಭಿಸಿಯೇ ತೀರುತ್ತದೆ. ಹಾಗೂ ಆ ಹಳ್ಳಿಯಲ್ಲಿಯೂ ಜಾಗ್ರತೆಯುಂಟಾಗುತ್ತದೆ. ಇದು ನನ್ನ ಅನುಭವ. ನಮ್ಮಲ್ಲಿ 'ಪಾಸ್' ಆಗಿ ಹೋದ ಹಲವು ಯುವಕರ ಅನುಭವ.

ಈ ವಿಚಾರಗಳಿಂದ ಹುರಿಗೊಂಡೇ ಇಲ್ಲಿ **ಪ್ರೇಮ** ವಿದ್ಯಾಪೀಠದಲ್ಲಿ **ಮೆಡಿಕಲ್ ಕಾಲೆಜ್** ಸ್ಥಾಪಿಸಲ್ಪಟ್ಟಿತು. ಇದು ಬ್ರಿಟಿಷ್ ಸರಕಾರದಲ್ಲಿ ರಿಜಿಸ್ಟರಾದ ಸಂಸ್ಥೆ. ಇಷ್ಟರವರೆಗೆ ತೇರ್ಗಡೆಹೊಂದಿ ಹೋದವರ ಪೈಕಿ ಪ್ರತಿಯೊಬ್ಬರೂ ಸಾಕಷ್ಟು ಕೀರ್ತಿಯನ್ನೂ ಧನವನ್ನೂ ಸಂಪಾದಿಸುತ್ತಿದ್ದಾರೆ. ಇಲ್ಲಿ ವೈದ್ಯ ವಿದ್ಯಾಭ್ಯಾಸವನ್ನು ಮಾಡಿಸುವ ವ್ಯವಸ್ಥೆ, ಸಲಕರಣೆಗಳು ಬಹಳ ಚೆನ್ನಾಗಿವೆ. ಹಲವರು ಇಲ್ಲಿಂದ ವಿದ್ಯೆಯನ್ನು ಮುಗಿಸಿ ಹೋಗಿ ಪಟ್ಟಣಗಳಲ್ಲಿಯೂ ಚೆನ್ನಾಗಿ ದುಡಿದು ಸಂಪಾದಿಸುತ್ತಿದ್ದಾರೆ. ಹಲವು ಪ್ರಾಂತ್ಯಗಳ ಯುವಕರು ಇಲ್ಲಿ ಅಭ್ಯಾಸ ಮಾಡುತ್ತಿದ್ದಾರೆ. ಇಲ್ಲಿಂದ ಕಲಿತು ಹೋದವರ ಸಂಪಾದನೆಯು ವಿವಿಧವಾಗಿದೆ. ಎರಡು ವರ್ಷಗಳಲ್ಲಿಯೇ ತಿಂಗಳಿಗೆ ೧೦೦ ರೂಪಾಯಿಗಳ ವರೆಗೆ ಕೆಲವರ ಸಂಪಾದನೆಯು ಮುಟ್ಟಿದೆ. ಒಂದು ವರ್ಷದೊಳಗಾಗಿ ತಿಂಗಳಿಗೆ ಸರಾಸರಿ ೨೫ ರೂಪಾಯಿಗಳಿಗಿಂತ ಸಂಪಾದನೆ ಕಡಿಮೆ ಯಾರಿಗೂ ಆಗಲಿಲ್ಲ. ಹಳ್ಳಿಗಳಲ್ಲಿ ದುಡಿಯುವವರಿಗೆ ಧನಮಾನಗಳೆರಡೂ ಸಾಕಷ್ಟು ಉಂಟಾಗುತ್ತಿವೆ. ಇವರಿಗಾಗುವ ಸಂಪಾದನೆಯೊಡನೆ ಇವರಿಂದಾಗುವ ಜನಸೇವೆಯನ್ನೂ ಲೆಕ್ಕಿಸಬೇಕಲ್ಲವೆ? ನಿರುದ್ಯೋಗದ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸ್ವಪರ ಹಿತಕಾರಕ ಮಾರ್ಗವು ಇದಕ್ಕಿಂತ ಹೆಚ್ಚಿನದು ನನಗೆ ತೋರುವುದಿಲ್ಲ. ನಮ್ಮಲ್ಲಿ ವೈದ್ಯ ವಿದ್ಯೆಯೊಡನೆ ಹಳ್ಳಿಗಳ ಅಭಿವೃದ್ಧಿಗಾಗಿ ಬೇಕಾದ ಇತರ ಹಲವು ವಿಷಯಗಳ ಮಾಹಿತಿಯನ್ನೂ ಕೊಡಲಾಗುತ್ತದೆ. ಇಂಥ ಸಂಸ್ಥೆಗಳು ಬೆಳೆಯುತ್ತ ಹೋದಂತೆ ಹಳ್ಳಿಗಳ ಸಂಸ್ಕರಣವೂ ಬೆಳೆಯುವುದು ಎಂದು ನನ್ನ ಮತ.

ಇದೇ ವರ್ಷದ ಜುಲೈ ೧೫ಕ್ಕೆ ಇಲ್ಲಿ ಹೊಸ ವರ್ಷದ ಶಿಕ್ಷಣವು ಮೊದಲಾಗುವುದು. ಪ್ರೇಮ ವಿದ್ಯಾಪೀಠದ ಅಧಿಕಾರಿಗಳು ಈ ವರ್ಷ "ಭಿಷಗಿಂದು" ಎಂಬ ಡಿಗ್ರಿಯ ಶಿಕ್ಷಣಕ್ಕೆ ೬ ವಿದ್ಯಾರ್ಥಿಗಳನ್ನೂ "ಚಿಕಿತ್ಸಿನ್" ಎಂಬ ಡಿಪ್ಲೋಮಾದ ಶಿಕ್ಷಣಕ್ಕೆ ೧೨ ಮಂದಿಯನ್ನೂ ಶಿಕ್ಷಣಕ್ಕೆ ಏನೂ ಫೀಸ್ ಇಲ್ಲದೆ ಸೇರಿಸಿಕೊಳ್ಳಬೇಕೆಂದು ನಿರ್ಧರಿಸಿದ್ದಾರೆ. ಎಸ್. ಎಸ್. ಎಲ್. ಸಿ. ಪಾಸ್ ಆದವರು "ಭಿಷಗಿಂದು" ಶಿಕ್ಷಣಕ್ಕೆ ಅರ್ಹರು. "ಸಾಯನ್ಸ್" ತಕ್ಕೊಂಡು ಪಾಸ್ ಆದವರಿಗೆ ಪ್ರಾಮುಖ್ಯತೆಯುಂಟು.

(೧೬ನೇ ಪುಟಕ್ಕೆ ಮುಂದುವರಿದಿದೆ.)

ನಾರಿ.

ಲೇಖಕಿ:—ಶ್ರೀಮತಿ ಗುಲ್ವಾಡಿ ಶಾಂತಾದೇವಿ, ಮಹಿಳಾ ವಿದ್ಯಾಪೀಠ, ಅಲಹಾಬಾದ್

ಸ್ತ್ರೀಯು ಯಾರೆಂಬುದನ್ನು ಬಲ್ಲಿರಾ? ಆಕೆಯು ಪರಮ ಪುನೀತನಾದ ಪರಮಾತ್ಮನ ಸರ್ವೋತ್ಕೃಷ್ಟ ಕೃತಿಯಾಗಿರುತ್ತಾಳೆ. ಇಡೀ ಜಗತ್ತಿನ ಕೋಮಲವಾದ ವಸ್ತುವಾಗಿರುತ್ತಾಳೆ. ಸುಶೀಲತೆ ಮತ್ತು ಸೌಜನ್ಯದ ಪ್ರಾಣದೇವತೆಯಾಗಿರುತ್ತಾಳೆ. ಸುಖದ ಶುಚಿಕರವಾದ ಕಾಮನಾಸ್ವರೂಪಿಣಿಯಾಗಿರುತ್ತಾಳೆ. ಕವಿಕುಲತಿಲಕರ ಮಾಧುರ್ಯಯುಕ್ತವಾದ ಕಲ್ಪನಾತರಂಗಗಳನ್ನು ಇಂಪುಗೊಳಿಸುವವಳಾಗಿರುತ್ತಾಳೆ. ನಾರಿಯೇ ಸಭ್ಯತೆಯ ಜನನಿಯು. ಇವಳು ತನ್ನ ಕೋಮಲ ಸ್ಪರ್ಶದಿಂದಲೇ ಮಾನವನನ್ನು ಸಭ್ಯನನ್ನಾಗಿ ಮಾಡಬಲ್ಲಳು. ತನ್ನ ಪವಿತ್ರ ಪ್ರೇಮದಿಂದಲೇ ಮಾನವನಿಗೆ ವಾಕ್ಶಕ್ತಿಯನ್ನು ಕೊಡುವಳು. ನಾರಿಯಿಂದ ಕೊಡಲ್ಪಟ್ಟ, ಆತ್ಮವಿಶ್ವಾಸದ ಪವಿತ್ರ ಮಂತ್ರದಿಂದ ಮಾನವನನ್ನು ಪ್ರತಿಭಾಶಾಲಿಯನ್ನಾಗಿ ಮಾಡಿ, ಪ್ರತಿಯೊಬ್ಬನೂ ಧರ್ಮ, ಸಮಾಜ ಹಾಗೂ, ದೇಶಕ್ಕಾಗಿ ನಿಸ್ವಾರ್ಥದಿಂದ ಪ್ರಜ್ವಲಿತವಾದ ಅಗ್ನಿಯಲ್ಲಿ ಕೂಡ ನಗುತ್ತಾ ಆತ್ಮಸಮರ್ಪಣೆಯನ್ನು ಮಾಡಲು, ಬದ್ಧಕಂಕಣನನ್ನಾಗಿ ಮಾಡುವಳು. ನಾರಿಯಿಂದ ಕೊಡಲ್ಪಟ್ಟ ಶಕ್ತಿಯಿಂದಲೇ ಮನುಷ್ಯನು ತನ್ನ ವೈರಿಯನ್ನು ಜಯಿಸುವನು. ಶಂಕರನ ಧನುಸ್ಸನ್ನು ಪುಡಿಗೈದ ಶ್ರೀರಾಮನೂ, ಗಾಂಡೀವಧಾರಿ ಅರ್ಜುನನೂ, ಗದಾಯೋದ್ಧನಾದ ಭೀಮಸೇನನೂ, ಚಕ್ರವ್ಯೂಹವನ್ನು ಹತಿಗೈದ ವೀರ ಅಭಿಮನ್ಯುವೂ, ಮೊಗಲಸಾಮ್ರಾಜ್ಯವೆಂಬ ಕಗ್ಗತ್ತಲೆಯನ್ನು ನಾಶಮಾಡಿ, ಸ್ವರಾಜ್ಯ ಪ್ರಕಾಶನನ್ನು ಎತ್ತಿ ಹಿಡಿದ ವೀರ ರಾಣಾ ಪ್ರತಾಪ್ ಛತ್ರಪತಿ ಶಿವಾಜಿ, ಬ್ರಿಟಿಷ್ ಸಾಮ್ರಾಜ್ಯದ ಮಧ್ಯದಲ್ಲಿ ಭಾರತೀಯರ ಹಕ್ಕು ಬಾಧ್ಯತೆಗಳನ್ನು ಜನತೆಯ ಮುಂದಿಟ್ಟು, ಹಿಂದೂ ಸಮಾಜದಲ್ಲಿರುವ ಅಂಧರೂಢಿಗಳೆಂಬ ಶೃಂಕಲೆಗಳನ್ನು ಪುಡಿಗೈಯಲು ಕೋಲಾಹಲವನ್ನುಂಟುಮಾಡುತ್ತಿರುವ ಮಹಾತ್ಮಾ ಗಾಂಧಿ ಮೊದಲಾದವರೆಲ್ಲರಿಗೂ, ನಾರೀಜೀವನದಿಂದಲೇ ಶಕ್ತಿಯು ದೊರೆತಿರುತ್ತದೆ. ಆದುದರಿಂದಲೇ ನಾರಿಯು ಶಕ್ತಿಪ್ರಧಾಯಿನಿಯಾಗಿರುತ್ತಾಳೆ. ನಾರೀಜೀವನವೇ ಇತಿಹಾಸದ ಜನ್ಮಸ್ಥಾನವು. ಯಾವ ದೇಶದಲ್ಲಿ ನಾರೀಜೀವನವು ಇರುವುದಿಲ್ಲವೋ ಆ ದೇಶದ ಇತಿಹಾಸವು ನಿರ್ಜೀವವಾಗಿರುವುದು. ವಾಲ್ಮೀಕಿ, ಕಾಳಿದಾಸ, ಕಬೀರ್, ತುಲಸೀದಾಸ್ ಇವರೆಲ್ಲರ ಜನ್ಮವು ನಾರಿಯಿಂದಲೇ ಲಭಿಸಿರುವುದು. ನಾರಿಯ ಮನೋರಾಜ್ಯದಲ್ಲಿ ಹೊರಡುವ ಪವಿತ್ರ ಭಾವನೆಗಳೇ ಶಬ್ದರೂಪವಾಗಿ ಭವಿಷ್ಯಸಂತಾನಕ್ಕೆ ಉಪದೇಶಿಸಲ್ಪಡುತ್ತದೆ. ನಾರಿಯೇ ಶೃಂಗಾರಮೂರ್ತಿಯಾಗಿರುವಳು. ಇವಳ ಶೃಂಗಾರ ಸಾಗರದಿಂದಲೇ ಕವಿಗಳು ಕವಿತಾಮಾಧುರ್ಯವನ್ನು ಪಡೆಯುತ್ತಾರೆ. ಈ ಮಾತು ಸುಳ್ಳಾಗಲಾರದು. ಸ್ತ್ರೀಯ ಜೀವನವು ಹಿಮಕ್ಕಿಂತಲೂ ಶೀತಲವಾಗಿರುತ್ತದೆ. ಯಾವ ಸಮಯದಲ್ಲಿ ಮನುಷ್ಯನು ಜ್ಞಾನಶೂನ್ಯನಾಗಿ ಒಳ್ಳೇದು ಕೆಟ್ಟದರ ಅರಿವಿಲ್ಲದೆ ಹಸಿದ ಹಿಂಸಕ ಜಂತುಗಳಂತೆ ಕಂಡಕಂಡಲ್ಲಿ ಕೈಗೆ ಸಿಕ್ಕಿದವರನ್ನು ಪೀಡಿಸುತ್ತಾನೋ, ಅಂತಹ ಸಮಯದಲ್ಲಿ ನಾರಿಯ ಕೋಮಲ ಸ್ಪರ್ಶವು ಪವಿತ್ರ ಪ್ರೇಮ ಮತ್ತು ವಿಚಾರಯುಕ್ತವಾದ ಬೋಧನೆಯಿಂದಲೇ ಅವನ ಮನಸ್ಸನ್ನು ಶಾಂತಪಡಿಸಬಲ್ಲಳು. ಚಂದ್ರಹಾಸ್ಯಕ್ಕಿಂತಲೂ ಅಧಿಕ ಶೀತಲ ಸುಖದಾಯಕ ಮತ್ತು ಸಿಹಿಯಾದ ನಗುವನ್ನು ನಕ್ಕು ಉತ್ತೇಜಿತರಾದ ಮಾನವರ ಹೃದಯಾಗ್ನಿಯನ್ನು ಶಾಂತಮಾಡಬಲ್ಲಳು. ಮದಾಂಧರಾಗಿ ಕಂಗೆಟ್ಟ ಪುರುಷರನ್ನು ಸಮಾಧಾನಗೊಳಿಸುವ ಈ ಸಾಧನವು ನಾರಿಯ ವಿನಹ ಇನ್ನಾರ ವಶವೂ ಇರುವುದಿಲ್ಲ. ಇಂತಹ ಗುಣವು ಸ್ತ್ರೀಯಲ್ಲಿ ಇಲ್ಲದಿರುತ್ತಿದ್ದರೆ, ಇಂದಿಗೆ ಮಹಿಳಾ ಸಮಾಜವು ಪುರುಷರಿಂದ ಎಷ್ಟೋ ದೂರಕ್ಕೆ ತಳ್ಳಲ್ಪಡುತ್ತಿತ್ತು. ನಾರಿಯು ಕ್ರೋಧರಹಿತಳಾಗಿರುವಳು. ಪರಂತು, ನಾರಿಯ ಹೃದಯದಲ್ಲಿ ನಿಜವಾದ ಕ್ರೋಧವು ಹುಟ್ಟಿತೆಂದರೆ, ಅದನ್ನು ಸಮಾಧಾನಪಡಿಸಲು ಪುರುಷ ಸಮಾಜಕ್ಕೆ ಶಕ್ತಿಸಾಲದು. ಆ ಸಮಯದಲ್ಲಿ ನಾರಿಯಲ್ಲಿರುವ ಹಿಮತುಲ್ಯವಾದ ಶೀತಲವಾದ ಸ್ವಭಾವವು ಮಾಯವಾಗಿ ಧಗಧಗಿಸುತ್ತಿರುವ ಅಗ್ನಿಜ್ವಾಲೆಯ ರೂಪವನ್ನು ತಾಳುತ್ತದೆ. ಆಗ ನಾರಿಯು ಸಾಕ್ಷಾತ್ ಕಾಳಿಯಂತಿದ್ದು, ವೈರಿಗಳ ರಕ್ತವನ್ನು ಪಾನ ಮಾಡುವಳು. ಝಾನ್ಸೀ ಲಕ್ಷ್ಮೀಬಾಯಿಯ ರೂಪದಲ್ಲಿ ವೈರಿಗಳ ಮುಂದೆ ಅದ್ಭುತ ಶಕ್ತಿಯನ್ನು ತೋರಿಸಿ, ದೇಶಕ್ಕಾಗಿ ಆತ್ಮಸಮರ್ಪಣೆಗೈದವಳೂ ನಾರಿ; ಶ್ರೀರಾಮ ಚಂದ್ರನೊಡನೆ ಹಟಮಾಡಿ ಹದಿನಾಲ್ಕು ವರುಷ ವನವಾಸಕ್ಕೆ ಕಳುಹಿಸಿ

ದುದೂ, ಘೋರವಾದ ಮಹಾಭಾರತ ಯುದ್ಧವನ್ನು ರಚಿಸಿದುದೂ ನಾರೀಜೀವನವೇ. ಯಾವ ಸಮಯದಲ್ಲಿ ಪುರುಷ ಸಮಾಜವು ಸತ್ವಹೀನವಾಗಿ, ಕುಳಿತು ವಿಷಯವಾಸನ ಲೋಲುಕ್ತತೆಯಲ್ಲಿ ಬಿದ್ದು, ಕರ್ತವ್ಯಪಥವನ್ನು ಮರೆಯುತ್ತದೋ, ಆಗ ನಾರಿಯೇ ಅವರ ಶುಷ್ಕ ನರಗಳಿಗೆ ವೀರರಸವನ್ನು ತುಂಬುವಳು. ನಾರಿಯೇ ನಿರ್ಜೀವ ದೇಹಕ್ಕೆ ಜೀವದಾನ ಮಾಡುವವಳು. ಮನುಷ್ಯನು ಜೀವನದಲ್ಲಿ ದುಃಖಿತನಾಗಿ ಬೀದಿ ಬೀದಿ ಅಲೆದಾಡುತ್ತಿರುವ ಸಮಯದಲ್ಲಿ ನಾರಿಯಲ್ಲಿಯು ತನ್ನ ಹಿತೋಕ್ತಿಯಿಂದ ಆತನನ್ನು ಸರಿ ದಾರಿಗೆ ತರುವಳು. ನಾರೀ ಜೀವನವೇ ಸಂತೋಷದ ಮೂರ್ತಿಯಾಗಿರುತ್ತದೆ. ದುಃಖದಲ್ಲಿ ಸುಖದ ಅನುಭವವನ್ನೂ, ಸುಖದಲ್ಲಿ ದುಃಖದ ಅನುಭವವನ್ನೂ ಮಾಡಿಕೊಂಡು, ನರಕವನ್ನು ಸ್ವರ್ಗದಂತೆ ಮಾಡುವವಳೇ ನಿಜವಾದ ನಾರಿಯು. ನಾರಿಯು ತನ್ನ ಉಜ್ವಲವಾದ ಜೀವನಶಕ್ತಿಯಿಂದ ಎಷ್ಟೋ ಜನರನ್ನು ಆತ್ಮಹತ್ಯೆಯಿಂದ ಉಳಿಸಿರುವಳು; ಮರಣದಂಡನೆಯಿಂದ ತಪ್ಪಿಸಿರುವಳು. ಪರಾಧೀನತೆಯನ್ನು ತಪ್ಪಿಸಿ, ಸ್ವತಂತ್ರತೆಯನ್ನು ಸ್ಥಾಪಿಸುವಳು. ಸಂಸಾರದ ಸುಖದಲ್ಲಿ ಮಗ್ನರಾಗಿ ಉರಿಯುವ ದೀಪಗಳಲ್ಲಿ ಹಾರಾಡಿ ಬೀಳುವ ಪತಂಗಗಳಂತಿರುವ ಜನರು ಅನೇಕ ವೇಳೆ ನಾರಿಯಿಂದಲೇ ಸರಿದಾರಿಗೆ ಬಂದಿರುವರು. ಆದುದರಿಂದ ನಾರಿಯು ಹೇಳುವುದೇನಂದರೆ–'ನಾನು ಗೃಹಲಕ್ಷ್ಮಿಯಾಗಿದ್ದೇನೆ. ಪ್ರತಿ ಒಂದು ಗ್ರಹದಲ್ಲಿ ಸುಖಸಾಮ್ರಾಜ್ಯವಾಗಿದ್ದೇನೆ. ಇದು ಅರ್ಥಹೀನ ಕಲ್ಪನೆಯಲ್ಲ. ನಾನು ಅಳುವವನನ್ನು ನಗಿಸುವೆನು. ನಗುವವನನ್ನು ಅಳಿಸುವೆನು. ಈ ತರದ ನನ್ನ ಅಭೇದ್ಯವಾದ ಮಂತ್ರದಿಂದಲೇ ಪ್ರತಿಯೊಬ್ಬ ಮಾನವನ ಹೃದಯದಲ್ಲಿ ಅಧಿಕಾರವನ್ನು ನಡೆಸುವೆನು. ದಾಸಿಯಾಗಿ ನಾನೆಂದಿಗೂ ಇರಲಾರೆ. ಶಾಸನಕರ್ತಳಾಗಿಯೇ ನಾನು ಜನಿಸಿದ್ದೇನೆ. ನನ್ನ ಸ್ಥಾನವು ಎಲ್ಲರಿಗಿಂತಲೂ ಉತ್ತಮವಾಗಿರುತ್ತದೆ. ಯಾರೂ ನನ್ನನ್ನು ಆದರ ಸತ್ಕಾರದಿಂದ ಮತ್ತು ಪ್ರೇಮದಿಂದ ನೋಡುತ್ತಾರೋ ಅಲ್ಲಿ ನನ್ನಿಂದ ಸರ್ವತರದ ಸುಖಶಾಂತಿಯು ನೆಲೆನಿಲ್ಲುವುದು. ಎಲ್ಲಿ ನನ್ನ ನಿರಾದರ ಮಾಡಿ ತಿರಸ್ಕರಿಸುವರೋ ಅಲ್ಲಿ ನಿತ್ಯ ದುಃಖವು ನಲೆಗೊಳ್ಳುವುದು. ನಿಷ್ಕಲಂಕವಾದ ಮತ್ತು ಪವಿತ್ರವಾದ ಪ್ರೇಮದಿಂದ ನನ್ನನ್ನು ಪ್ರೀತಿಸುವ ನನ್ನ ಪ್ರಿಯತಮನಿಗೆ ನಾನೇ ಪ್ರೇಮದ ಮೂರ್ತಿಯಾಗಿರುವೆನು. ನನ್ನ ಸತೀತ್ವವು ಸೂರ್ಯನಿಗಿಂತಲೂ ಅಧಿಕಪ್ರಕಾಶವುಳ್ಳದ್ದು. ಪ್ರಕೃತಿಗಿಂತ ಹೆಚ್ಚು ಸುಂದರವುಳ್ಳದ್ದಾಗಿರುತ್ತದೆ. ಪಾಪಿ ಮತ್ತು ಸ್ವಾರ್ಥಿ ಆತ್ಮವು ನನ್ನ ಶರೀರವನ್ನು ಸ್ಪರ್ಶಿಸಲಿಕ್ಕಿಲ್ಲ. ತೇಜೋಮಯವಾದ ನನ್ನ ಮುಖವನ್ನು ಕಣ್ಣೆತ್ತಿ ನೋಡಲಿಕ್ಕಿಲ್ಲ. ಈ ತರದ ದುರ್ವರ್ತನೆಯಿಂದಲೇ ಪಾಪಿ ದುಶ್ಶಾನನೂ, ದುಷ್ಟ ರಾವಣನೂ ತಮ್ಮನ್ನು ತಾವೇ ಕೆಡಿಸಿಕೊಂಡರು. ನನ್ನ ತತ್ವವು ಇಡೀ ಜಗತ್ತಿಗೆ ಪೂಜ್ಯನೀಯವಾಗಿರುತ್ತದೆ. ಪರಪುರುಷರನ್ನು ಸ್ವಪ್ನದಲ್ಲಿ ಕೂಡ ಇಚ್ಛಿಸುವುದೂ ಧರ್ಮವನ್ನು ತ್ಯಜಿಸಿ ಅಧರ್ಮವನ್ನು ಆಚರಿಸಿದಂತಾಗುತ್ತದೆ. ಪತಿಯೇ ನನ್ನ ಭೂಷಣ, ಪತಿಯೇ ನನ್ನ ಜೀವನಾಧಾರ, ಪತಿಯೇ ನನ್ನ ಸರ್ವಸ್ವ. ಪತಿಯೆಲ್ಲಿರುವರೋ ಅಲ್ಲಿಯೇ ನಾನೂ ಇರುವೆನು. ಈ ಆದರ್ಶತೆಯನ್ನು ಪಾಲಿಸುವುದಕ್ಕಾಗಿಯೇ ನಾನು ಪ್ರಜ್ವಲಿಸುವ ಅಗ್ನಿಯಲ್ಲಿ ಸಹಗಮನ ಮಾಡಿದೆನು. ಇದು ಆತ್ಮತ್ಯಾಗವಲ್ಲವೇ? ನಿಜವಾದ ಪ್ರೇಮವಲ್ಲವೇ? ಇಂತಹ ತ್ಯಾಗ ಬೇರೆ ಎಲ್ಲಿದೆ? ನನ್ನ ಸುಕೋಮಲವಾದ ಹೃದಯದಲ್ಲಿಯೇ ಈ ತತ್ವವು ಅವಿತುಕೊಂಡಿರುವುದು. ನಾರಿಯು ಮೋಸಗಾರಳು; ಉನ್ನತಿಯ ಪಥದಲ್ಲಿ ಮುಳ್ಳಿನಂತಿರುವಳೆಂದು ಯಾರು ಹೇಳುವರು? ಸ್ವಾರ್ಥಿಗಳೇ ಹಾಗೆ ಹೇಳುವರು. ನಾನು ಜಗತ್ತಿನಲ್ಲಿ ಸಿಂಹಿಣಿಯು ಹಾಗೆ ಸಂಚಾರಮಾಡುತ್ತೇನೆ. ದುರಾಚಾರಿ ಪುರುಷರು ನನ್ನ ಸತೀತ್ವವನ್ನು ಕೆಡಿಸಲಿಕ್ಕೆ ಉದ್ಯುಕ್ತರಾದಾಗ ಸಿಂಹಿಣಿಯು ಹಾಗೆ ಅವರ ಮೇಲೆ ಬಿದ್ದು ಅವರಲ್ಲಿರುವ ಕಲುಷಿತ ಭಾವನೆಗಳನ್ನು ನಾನೇ ದೂರ ಮಾಡುತ್ತೇನೆ. ಮಾನವ ಸಮಾಜದ ಭವಿಷ್ಯ ಜೀವನವನ್ನು ನಿರ್ಮಾಣಮಾಡುವವಳೂ ನಾನಾಗಿರುತ್ತೇನೆ. ಮಕ್ಕಳಿಗೆ ವೀರತೆಯ ಮತ್ತು ಧರ್ಮದ ಉಪದೇಶವನ್ನು ಕೊಡುವವಳೂ ನಾನೆ. ಆಶಾಹೀನರಿಗೆ ಆಶೆಯನ್ನುಂಟುಮಾಡುವೆನು. ನನ್ನ ಶಿಕ್ಷಣದಿಂದಲೇ ಜನರು ಮಂತ್ರಮುಗ್ಧರಾಗುತ್ತಾರೆ. ನನ್ನ ದೃಷ್ಟಿಯಲ್ಲಿ ಮೃತ್ಯುವಿಗಿಂತ ಅಧಿಕ ಭಯವೂ, ನನ್ನ ಶಬ್ದವು ವಜ್ರಕ್ಕಿಂತ ಅತೀ ಗಂಭೀರವೂ ಆಗಿರುತ್ತದೆ. ಚಿಕ್ಕ ಮಕ್ಕಳು ದುರ್ಮಾರ್ಗದಲ್ಲಿ ಪ್ರೇರಿತರಾದಾಗ ನನ್ನ ಈ ಕೈಗಳೇ ಅವರನ್ನು ಸರಿ ದಾರಿಗೆ ತರುವುವು. ಪರಂತು, ನನ್ನ ಆ ಪೆಟ್ಟು ವೈರಿಗಳ ಪೆಟ್ಟಲ್ಲ. ನನ್ನಿಂದಲೇ ದೇಶದ ಉನ್ನತಿಯೂ ಅವನತಿಯೂ ಆಗಬಲ್ಲುದು. ಮಕ್ಕಳಿಗೆ ಬಾಲ್ಯಾರಭ್ಯದಿಂದಲೂ ದೇಶಪ್ರೇಮ, ಆತ್ಮತ್ಯಾಗ, ವೀರತ್ವ, ನಿರ್ಭೀಕತನ, ಈಶ್ವರ ಭಕ್ತಿ ಮುಂತಾದ ಬೋಧನೆಗಳನ್ನು ಬೋಧಿಸುವವಳು ನಾನೆ. ನನ್ನುದರದಲ್ಲಿಯೇ ಅಪ್ರತಿಮ ದೇಶ ಮುಖಂಡರೂ, ಸುಪ್ರ

(೧೩ನೇ ಪುಟಕ್ಕೆ ಮುಂದುವರಿದಿದೆ.)

ಮಣ್ಣು.

ಲೇಖಕ:—"ಭಟ್ಟ" (ತರುಣರ ದಂಡು.)

ಒಂದು ಊರಿನಲ್ಲಿ ಧನಿಕನೊಬ್ಬನಿದ್ದ. ಆತನಿಗೆ ಮೂವರು ಮಕ್ಕಳಿದ್ದರು. ತಂದೆಯು ತನ್ನ ಆಸ್ತಿಯನ್ನು ಸಮನಾಗಿ ಹಂಚಿಕೊಟ್ಟು ತೀರ್ಥಯಾತ್ರೆ ಹೊರಟ. ಹಿರಿಯವನು ತನ್ನ ಪಾಲಿಗೆ ಬಂದ ಹಣದಿಂದ ಸೈನಿಕರನ್ನು ಕೂಡಿಸಿ, ದೊಡ್ಡ ರಾಜ್ಯವೊಂದನ್ನು ಕಟ್ಟಲು ಪ್ರಯತ್ನಿಸಿದ. ಎರಡನೆಯವನು ವ್ಯಾಪಾರಕ್ಕೆ ಹೊರಟ. ಮೂರನೆಯವನು ಹೊಲಗದ್ದೆಗಳನ್ನು ಕೊಂಡುಕೊಂಡ.

ಹಿರಿಯವನು ಸೈನಿಕರ ಸಹಾಯದಿಂದ ದೊಡ್ಡ ರಾಜ್ಯವೊಂದನ್ನು ಗೆದ್ದು ಆಳುತ್ತಿದ್ದ. ರಾಜನಾದ ಆತನಿಗೆ ಯಾರೂ ಲಕ್ಷ್ಯವಿರಲಿಲ್ಲ. ಎಲ್ಲರೂ ತನ್ನ ಆಜ್ಞೆಯಂತೆ ನಡೆಯಬೇಕೆಂದು ಕಟ್ಟಾಜ್ಞೆ. ಆಜ್ಞೆಯನ್ನು ಪಾಲಿಸದವರಿಗೆ ಕತ್ತಿಯ ಬಾಯಿಯಿಂದಲೇ ಶಿಕ್ಷೆ. ಸುಂದರ ಸ್ತ್ರೀಯರು ಯಾರೂ ತಮ್ಮ ಧರ್ಮವನ್ನು ಉಳಿಸಿಕೊಂಡು ಮಾನವಾಗಿ ಬದುಕಲು ಅವಕಾಶವಿಲ್ಲ: ದೃಷ್ಟಿ ಬಿದ್ದ ಕೂಡಲೇ ದೊರೆಯು ಅವರನ್ನು ತನ್ನ ಅಂತಃಪುರಕ್ಕೆ ಸೇರಿಸಿಕೊಂಡು ಬಿಡುತ್ತಿದ್ದ. ಧನಿಕರು ಮಹಲಿನಲ್ಲಿ ವಾಸಮಾಡುವಂತಿಲ್ಲ. ಅದು ರಾಜನದಾಗುತ್ತಿತ್ತು. ದುಡ್ಡಿದೆಯೆಂದು ಎರಡು ಪುಡಿ ಕಾಸುಗಳನ್ನು ಜೇಬಿನಲ್ಲಿಟ್ಟುಕೊಂಡು ಮೆರೆಯುವಂತಿಲ್ಲ: ಎಲ್ಲವೂ ದೊರೆಯ ಬೊಕ್ಕಸಕ್ಕೆ ಸೇರುತ್ತಿತ್ತು. ಬಡವರಾದರೂ ಆತನ ರಾಜ್ಯದಲ್ಲಿ ಸುಖವಾಗಿರಲಿಲ್ಲ. ನಿತ್ಯವೂ ದೊರೆಯ ಆಜ್ಞೆಯಂತೆ ಕೋಟೆಯನ್ನು ಕಟ್ಟುವುದಕ್ಕೋ—ಇಲ್ಲವೆ ಅರಮನೆಯ ಕೆಲಸಕ್ಕೋ ಹೋಗಬೇಕಾಗಿತ್ತು. ಇಲ್ಲವಾದರೆ ಮರಣದಂಡನೆಯಾಗುತ್ತಿತ್ತು. ಆದರೆ ಅವರ ಹೊಟ್ಟೆಯ ವಿಷಯದಲ್ಲಿ ದೊರೆಯ ಲಕ್ಷ್ಯವೇ ಬೀಳುತ್ತಿರಲಿಲ್ಲ. "ಅವರಿಗೇನು: ನನ್ನ ಆಳ್ವಿಕೆಯಲ್ಲಿ ಸುಖವಾಗಿದ್ದಾರೆ" ಎನ್ನುತ್ತಿದ್ದ. ಯಾರಿಗೂ ದೊರೆಯ ಕೊಟಲೆಯನ್ನು ಸಹಿಸಲಾಗಲಿಲ್ಲ. ಬಡವರು ತಿರುಗಿ ಬಿದ್ದರು. ಧನಿಕರು ಅವರ ಬೆನ್ನು ತಟ್ಟಿದರು. ಸ್ತ್ರೀಯರು ಕತ್ತಿ ಹಿಡಿದು ಮುಂದೆ ನುಗ್ಗಿದರು. ಎದುರು ಬಿದ್ದವರಿಗೆ ಚಿತ್ರ ವಿಚಿತ್ರ ಹಿಂಸೆಯನ್ನು ಆ ದೊರೆಯು ಕೊಡಿಸಿದ. ಅದರಿಂದ ಜನರಿಗೆ ಪೆಟ್ರೋಲ ಬಳಿ ಬೆಂಕಿಯಿದ್ದಂತಾಯಿತು. ರೋಷದಿಂದ ಮುಂದೆ ನುಗ್ಗಿ ದೊರೆಯನ್ನು ರಾಜ್ಯದಿಂದ ಓಡಿಸಿದರು. ದೊರೆಯ ಕಡೆಯವರೂ, ಹೆಂಡತಿ ಮಕ್ಕಳೂ ಪ್ರಜೆಗಳ ಕತ್ತಿಯ ಬಾಯಿಗೆ ತುತ್ತಾದರು. ದೊರೆಯೊಬ್ಬನೆ ಉಳಿದವನು; "ನೀನೇ" ಎನ್ನುವವರಿಲ್ಲ: ಪ್ರಜೆಗಳು ಕಂಡರೆ ಎಲ್ಲಿ ಜೀವ ತೆಗೆಯುವರೋ ಎಂಬ ಭಯ ಬೇರೆ. ಹೇಳದೆ ಕೇಳದೆ ಪಲಾಯನ ಮಾಡಿದ. ತಿನ್ನಲು ಅನ್ನವಿಲ್ಲ. ಕುಡಿಯಲು ತೊಟ್ಟು ನೀರು ಕೊಡುವವರಿಲ್ಲ: ದಿಕ್ಕಿಲ್ಲದೆ ಕಾಡಿನಲ್ಲಿ ಹುಚ್ಚನಂತೆ ಅಲೆಯುತ್ತಿದ್ದ.

ತೀರ್ಥಯಾತ್ರೆ ಮಾಡುತ್ತಿದ್ದ ತಂದೆಯು ಅದೇ ಮಾರ್ಗವಾಗಿ ಊರಿಗೆ ಬರುತ್ತಿದ್ದ. ಹುಚ್ಚನಂತೆ ಅಲೆಯುತ್ತಿದ್ದ ಮಗನನ್ನು ಕಂಡು "ಏಕಪ್ಪಾ ಹೀಗೆ ಅಲೆಯುತ್ತಿರುವೆ?" ಎಂದು ವ್ಯಸನದಿಂದ ಕೇಳಿದ. ಉಕ್ಕಿ ಬರುವ ದುಃಖವನ್ನು ತಡೆಯಲಾರದೆ ಕಣ್ಣೀರು ಸುರಿಸುತ್ತ "ದೊರೆಯಾಗಿದ್ದುದರ ಫಲ" ಎಂದ ಪದಚ್ಯುತನಾದ ದೊರೆ.

ತಂದೆಯು ಮಗನನ್ನು ಸಂತೈಸಿ, ಸಂಗಡ ಕರೆದುಕೊಂಡು ಮುಂದಕ್ಕೆ ಹೊರಟ.

ಎರಡನೆಯವನು ವ್ಯಾಪಾರದಲ್ಲಿ ಕೋಟಿಗಟ್ಟಲೆ ಹಣವನ್ನು ಸಂಪಾದಿಸಿದ. ಕೋಟ್ಯಾಧೀಶ್ವರನಾದಾಗ ಮೊದಲಿನಂತೆಯೇ ಇರಲು ಸಾಧ್ಯವೇ? ಕೋಟ್ಯಾದಿಪತಿಗಳಿಗೆ ತಕ್ಕುದಾದ ಬಟ್ಟೆಬರೆಗಳು, ಠೀವಿ, ಬೆಡಗು-ಎಲ್ಲವೂ ಒಂದೊಂದಾಗಿ ಬೆಳೆದವು. ವಾಸಿಸಲು ಉತ್ತಮವಾದ ಮಹಲೊಂದು ಇರಲಿಲ್ಲ. ಅಂದವಾದ ಮಹಲನ್ನು ಕಟ್ಟಿಸಲು ತಳಹದಿಯನ್ನು ಮೆಟ್ಟಿಸಿದ. ಸ್ನೇಹಿತರು ಅವನನ್ನು ಕುರಿತು "ಇದೇನಯ್ಯ!" ಸಾಹುಕಾರನಾದ ನೀನು ಹೀಗೆ ಮನೆಯನ್ನು ಕಟ್ಟಿದರೆ ನೋಡಿದವರೇನೆಂದಾರು? ಇನ್ನೂ ವಿಶಾಲವಾಗಿ ಅರಮನೆಯ ಹಾಗೆ ಕಟ್ಟಿಸಬೇಕು—"ಎಂದು ಸೂಚಿಸಿದರು. ಸ್ನೇಹಿತರ ಸೂಚನೆಯನ್ನು ನಿರಾಕರಿಸುವಂತಿಲ್ಲ; ಮೊದಲನೆಯ ಸಲ ಹಾಕಿಸಿದ್ದ ತಳಹದಿಯನ್ನು ಕೀಳಿಸಿ, ಬೇರೆ ವಿಧವಾಗಿ ವಿಶಾಲವಾಗಿ ಕಟ್ಟಿಸಲು ಮೊದಲು ಮಾಡಿದ. ಮಹಲು ಅರ್ಧ ಮುಗಿಯುವುದರೊಳಗಾಗಿ ಹಣವೂ ಮುಗಿಯಿತು. ಜತೆಗೆ ವ್ಯಾಪಾರವೂ ಬಿದ್ದು ಹೋಗಿದ್ದುದರಿಂದ ಲಾಭವೂ ಬರುತ್ತಿರಲಿಲ್ಲ. ಹತ್ತಿರ

ಖಿದ್ದುದಕ್ಕೇ ಸಂಚಕಾರ. ಹಣ ಮುಗಿಯಿತು. ಮನೆಯ ಕೆಲಸ ಅರ್ಧಕ್ಕೇ ನಿಂತಿತ್ತು. ಪ್ರಯತ್ನಿಸಿದ ಕಾರ್ಯವನ್ನು ಅರ್ಧ ಮುಗಿಸಿ ನಿಲ್ಲಿಸುವಂತಿಲ್ಲ. ಗೌರವಕ್ಕೆ ಕಡಿಮೆ. ಸಾಲ ಮಾಡಿ ಮಹಲನ್ನು ಮುಗಿಸಿದ. ಸಾಲ ತೀರಿಸಲು ಮಾರ್ಗವಿಲ್ಲ. ವ್ಯಾಪಾರದಲ್ಲಿ ಲಾಭ ಬರುವುದೆಂದು ನೆನೆಸಿದ್ದ. ವ್ಯಾಪಾರವು ಆರ್ಥಿಕ ಮುಗ್ಗಟ್ಟಿನಿಂದ ಕುಸಿದಿತ್ತು. ಸಾಲ ಕೊಟ್ಟವರು ಒಂದು ವರುಷ ನೋಡಿದರು; ತೀರಿಸಲಿಲ್ಲ. ಎರಡು ವರುಷ ನೋಡಿದರು; ತೀರಿಸುವ ಚಿಹ್ನೆಯೇ ಕಂಡು ಬರಲಿಲ್ಲ. ಪ್ರಯತ್ನದಲ್ಲಿಯೇ ಐದು ವರ್ಷಗಳು ಕಳೆದವು. ಬಡ್ಡಿಯು ಅಸಲಿನ ಎರಡಷ್ಟಾಯಿತು. ವ್ಯಾಪಾರಿಗೆ ತುಂಬ ಆಸ್ತಿಯಿತ್ತು. ಎಲ್ಲವನ್ನೂ ಸಾಲಗಾರರಿಗೆ ವಹಿಸಬೇಕಾಗಿ ಬಂತು. ವಹಿಸಿದ ನಂತರ "ಭಿಕ್ಷೆ"—ವಿನಹ ಬೇರೆ ಮಾರ್ಗವೇ ಇರಲಿಲ್ಲ ಆತನಿಗೆ ಜೀವನವನ್ನು ನಡೆಯಿಸುವುದಕ್ಕೆ.

ದಿನವೂ ಭಿಕ್ಷೆ ಬೇಡಿ ತಂದು ಹೆಂಡತಿ ಮಕ್ಕಳನ್ನು ಸಾಕುತ್ತಿದ್ದ. ಜೋಳಿಗೆ ಹಿಡಿದು ಬೀದಿಯಲ್ಲಿ ಭಿಕ್ಷೆ ಬೇಡುತ್ತ ಬರುತ್ತಿದ್ದ ಮಗನನ್ನು ಕಂಡು ಯಾತ್ರಿಕನಿಗೆ ವ್ಯಸನವಾಯಿತು. "ಏಕಪ್ಪಾ ನಿನಗೀಗತಿ ಬಂದಿತು?" ಎಂದು ತಂದೆಯು ಕೇಳಿದ.

"ವ್ಯಾಪಾರ ಧರ್ಮದ ತಿರುಳು ಇದು" ಎಂದ ವ್ಯಾಪಾರಿ ತನ್ನನ್ನು ತಾನು ನಿಂದಿಸಿಕೊಳ್ಳುತ್ತ.

ಯಾತ್ರಿಕನು ಅವನನ್ನೂ ಅವನ ಹೆಂಡತಿ ಮಕ್ಕಳನ್ನೂ ಸಂಗಡ ಕರೆದುಕೊಂಡು ಊರಿಗೆ ಹೊರಟ.

ಕಿರಿಯುವನು ತನ್ನ ಪಾಲಿಗೆ ಬಂದ ಹಣಕ್ಕೆ ಹೊಲಗದ್ದೆಗಳನ್ನು ಕೊಂಡುಕೊಂಡಿದ್ದ. ಹೊಲಗದ್ದೆಗಳಲ್ಲಿ ಬೇಕಾ ಬೆಳೆದು—ತನಗೆ ಬೇಕಾದಷ್ಟು ಇಟ್ಟುಕೊಂಡು ಉಳಿದುದನ್ನು ದಾನಮಾಡುತ್ತಿದ್ದ. ಅನೇಕರು ಬಡಬಗ್ಗರು ಬಂದು ಆತನನ್ನು ಆಶ್ರಯಿಸಿದ್ದರು. ಯಾರನ್ನೂ ಆತನು ಹೋಗೆನ್ನುತ್ತಿರಲಿಲ್ಲ. ಬಂದವರಿಗೆ ಕಷ್ಟಪಟ್ಟು ಕೆಲಸಮಾಡುವುದನ್ನು ಕಲಿಸುತ್ತಿದ್ದ. ಸೋಮಾರಿಗೆ ಆತನ ಹತ್ತಿರ ಭಿಕ್ಷೆಯೂ ಹುಟ್ಟುತ್ತಿರಲಿಲ್ಲ. ಆರ್ಥಿಕ ದುಃಸ್ಥಿತಿಯಿಂದ ವ್ಯಾಪಾರವು ಕುಸಿದಿತ್ತು. ವ್ಯಾಪಾರಿಗಳೆಲ್ಲರೂ ಭಿಕ್ಷೆಗೆ ಹೊರಡುವ ಕಾಲವು ಬಂದಿತ್ತು. ಆದರೆ ಆತನಿಗೂ, ಆತನ ಅನುಯಾಯಿಗಳಿಗೂ ಯಾವ ತೊಂದರೆಯೂ ಇರಲಿಲ್ಲ. ರಾಜ್ಯಗಳು ಎಷ್ಟೋ ಹುಟ್ಟಿದವು; ಬೆಳೆದವು; ಅಳಿದವು. ಅದರಿಂದ ಆತನಿಗೆ ತೊಂದರೆಯಾಗಲಿಲ್ಲ. ತಿನ್ನುವುದಕ್ಕೆ ಬೇಕಾದ ಹಾಗೆ ಧವಸ ಧಾನ್ಯಗಳು ಬೆಳೆಯುತ್ತಿದ್ದ. ಬಟ್ಟೆಬರೆಗಳನ್ನು ಮನೆಯಲ್ಲಿಯೇ ನೇಯಿಸಿಕೊಳ್ಳುತ್ತಿದ್ದ. ಹೊಟ್ಟೆಗಿತ್ತು; ಬಟ್ಟೆಯಿತ್ತು; ಜಂಭಕ್ಕಾಗಿ ದುಂದುವೆಚ್ಚ ಮಾಡಬೇಕೆಂಬ ಬುದ್ಧಿಯಿತ್ತು. ಅದರಿಂದ ಸಾಲ ಮಾಡಬೇಕೆಂಬ ಯೋಚನೆ ಇರಲಿಲ್ಲ; ಸುಖಜೀವನವನ್ನು ನಡೆಯಿಸುತ್ತಿದ್ದ.

ಯಾತ್ರೆ ಮುಗಿಸಿಕೊಂಡು ತಂದೆಯು ಊರಿಗೆ ಬಂದ ಕಿರಿಯ ಮಗನನ್ನು ಕಂಡು ಸಂತೋಷವಾಯಿತು. ಮಗ ನನ್ನು ಕುರಿತು 'ಇವರ ಬದುಕೇ ಹಾಳಾಗಿ ಹೋಗಿದೆ. ಈ ಇಬ್ಬರು ಅಣ್ಣಂದಿರನ್ನೂ ನಿನ್ನ ಹತ್ತಿರದಲ್ಲಿಯೇ ಇಟ್ಟುಕೊಂಡು ಸಲಹು' ಎಂದ. ತಂದೆಯ ಮಾತಿನಂತೆಯೇ "ಆಗಲಿ" ಎಂದ ಕಿರಿಯವ.

ತಮ್ಮನ ಗುಣ, ವಿನಯ, ಸಂಪತ್ತುಗಳನ್ನು ಕಂಡು ಅವನ ಅಣ್ಣಂದಿರಿಗೆ ಆಶ್ಚರ್ಯವಾಯಿತು. ತಮ್ಮನನ್ನು ಕುರಿತು ಹಿರಿಯವನು ಹೇಳಿದ 'ನಾವಿಷ್ಟು ಕೆಟ್ಟರೂ ನೀನಿಷ್ಟು ಸೌಖ್ಯದಿಂದಿರಲು ಕಾರಣವೇನು?' ಎಂದು.

'ಅಣ್ಣ, ಮಣ್ಣು, ನಂಬಿದವರಿಗೆ ಮಣ್ಣೇ ಬುದ್ಧಿ ಕಲಿಸುತ್ತದೆ. ನಾವು ಮಣ್ಣಿನ ಬೊಂಬೆಗಳು. ಕೊನೆಗೆ ಮಣ್ಣಿನಲ್ಲಿಯೇ ಐಕ್ಯರಾಗುವವರು. ತಿನ್ನುವುದು ಮಣ್ಣಿನ ಪ್ರತಿರೂಪ. ಹಾಗಿದ್ದರೂ ಶಾಶ್ವತ ಸುಖಕ್ಕೆ ಕಾರಣವಾದ ಮಣ್ಣನ್ನು ನಂಬದೆ ಕ್ಷಣಕಾಲ ಸುಖ ಕೊಟ್ಟಿತೆಂದು ಹಣವನ್ನು ನೆಚ್ಚಿದರೆ ಈ ಹಿರಿಯ ಸುಖವೆಲ್ಲಿ ಬಂದೀತು? ಎಂದಾದರೂ ಒಂದು ದಿನ ಮಣ್ಣೇ ಗತಿ ನಮಗೆ—ಎಂದು ಮಣ್ಣನ್ನು ನಂಬಿ ಕೆಲಸ ಮಾಡುತ್ತಿದ್ದೇನೆ. ಸಾವಿರ ಹೊನ್ನಿಗಿಂತಲೂ ಹಿಡಿ ಮಣ್ಣು ಮಿಗಿಲಾಗಿ ತೋರುವುದು ನನಗೆ. ಹೊನ್ನಿದ್ದರೆ ಅದು ಮುಗಿದು ಹೋಗುವುದೆಂಬ ಭಯವಿದೆ. ಕದ್ದಾರೆಂಬ ಭಯವಿದೆ. ಮಣ್ಣಿದ್ದರೆ ಅದನ್ನು ಕದಿಯುವವರಾರು? ಮುಗಿಯುವುದೆಂಬ ಭಯವೆಲ್ಲಿ ಬಂತು? ಬೆಳೆದಷ್ಟೂ ಹೆಚ್ಚು ಬೆಳೆಯನ್ನು ಪಡೆಯಲು ಅಲ್ಲಿ ಅವಕಾಶ ಉಂಟು. ಹೆಚ್ಚೇಕೆ? ಮಣ್ಣಿದ್ದರೆ ರಾಜ್ಯ; ಮಣ್ಣಿದ್ದರೆ ವ್ಯಾಪಾರ; ಮಣ್ಣಿದ್ದರೆ ಜಗತ್ತು' ಎಂದ ಕಿರಿಯುವನು.

ಅಣ್ಣನು 'ನಿಜ' ಎನ್ನುತ್ತ ತಮ್ಮನನ್ನು ಅಪ್ಪಿಕೊಂಡ.

—ಜಯಕರ್ನಾಟಕ.

ಅವಳು!!

ಬರೆದುದು:—ಮಂಗಳೂರು ಜಾರಪ್ಪ.

ಗರ್ಭಗುಡಿಯೊಳಗಿನ ತೇಜೋಮಯ ಮೂರ್ತಿಯ ಗಂಭೀರ ವಾತಾವರಣದಲ್ಲಿ ಪ್ರಫುಲ್ಲಿತನಾಗಿ ಅನಿರ್ವಚನೀಯಾನಂದದಲ್ಲಿ ತಲ್ಲೀನನಾಗಿದ್ದೆ. ಸುತ್ತಮುತ್ತಲೂ ಪ್ರಜ್ವಲಿಸುತ್ತಿರುವ ದೀಪರಾಶಿ; ಸರ್ವಾಲಂಕೃತವಾಗಿರುವ ದಿವ್ಯ ವಿಗ್ರಹದೆದುರು ಸಾಷ್ಟಾಂಗವೆರಗಿ ಭಕ್ತಿಯ ಮುಡಿಪನ್ನರ್ಪಿಸುತ್ತಿರುವ ಪುಷ್ಪಗಂಧಗಳು; ಅಂತಃಕರಣದಲ್ಲಿ ದೃಢತೆಯ ಶಕ್ತಿಯನ್ನೆಳೆದು ನಿಲ್ಲಿಸುವ ಆಹ್ಲಾದಮಯ ಸುವಾಸನೆ; „ಜಗದಿರವೆ ನನ್ನಿರವು"—ಎಂದು ಅಚೇತನಸ್ವರೂಪ ಮೂರ್ತಿಯೇ ಘೋಷಿಸುವಂತೆ ಭಾಸಗೊಳಿಸುವ ಘಂಟಾನಾದ. ಕಾಣದ ಭಕ್ತಿಯು ಪ್ರಾಣ ಸಹಿತ ಮನವನ್ನಾಶ್ರಯಿಸುತ್ತದೆ ಆಗ.

ವಾದ್ಯಘೋಷಗಳ ಆವರಣದಲ್ಲಿ ಮೌನದ ಬಲ ಏರಿತ್ತು. ಸ್ತಬ್ಧನಾಗಿ ಬದ್ಧಾಂಜಲಿಯಾಗಿ ನಿಂತು—ಆ ಭಗವಾನನ ಅನಂತ ಲೀಲೆ, ಅಗಾಧ ಮಹಿಮೆಗಳನ್ನು ಸ್ಮರಣರಂಗಕ್ಕೆಳೆತಂದು ಅವುಗಳೊಡನೆ ನರ್ತಿಸಿದೆ. ಭಕ್ತಿಯ ಹುಚ್ಚು ಮನವನ್ನು ಕದಡಿಸಲು,—ಅಂತರ್ಯದಿಂದೊಂದು ತರಂಗವೆದ್ದು „ಮಹಾನ್ ಶಕ್ತಿಯೆ! ಕೂಡಿದಷ್ಟು ಹಿತವು ನನ್ನಿಂದ ಪರರಿಗಾಗುವಂತೆ ಮಾಡು!" ಎಂಬ ದೈನ್ಯ ಪ್ರಾರ್ಥನೆಯು ಮನದ ನಾಲಿಗೆಯ ಮೇಲೆ ಅಧಿಕಾರ ತೋರಿ ಮಾಯವಾಯಿತು.

ನಿಂತಲ್ಲಿಂದ ತಿರುಗಿ ಎರಡು ಹೆಜ್ಜೆಗಳನ್ನಿಡಲು, ಏಕೋ-ಹೇಗೋ—ನಾನರಿಯೆ;-ಕಣ್ಣು, ದೇವಸ್ಥಾನದ ಒಂದು ಬಾಗಿಲೆಡೆಗೆ ಸರಿಯಿತು! ಹೌದು!—ನಾನು ನೋಡಿದುದು ಮಾನಿನಿಯೊಬ್ಬಳ ವದನರಾಜವನ್ನು! ಹೃದಯವು ತಲ್ಲಣಿಸಿತು; ಆತ್ಮನೇ ಕಾಡಿದಂತೆ ಭಾಸವಾಯಿತು! ಜಗಲಿ ಮೇಲೆ ಕುಳಿತಿರುವ ತರುಣಿಯು ನೆಟ್ಟದಿಟ್ಟಿಯಿಂದ—ಮುಂಬರುವ ಕುತೂಹಲದಿಂದ—ನನ್ನನ್ನೇ ನೋಡುತ್ತಿದ್ದಂತೆ ಕಂಡಿತು. ರಕ್ತದ ಚಲನೆಯ ಕಿವಿಗೆ ಕೇಳಿಸೆ, ನಾನೂ ನೋಡಿದೆ!—ಅವಳೂ ನೋಡಿದಳು! ಅವಳೂ ನೋಡಿದಳು!—ನಾನು ನೋಡಿದೆ! ಕಂಡ ಕಣ್ಣನ್ನು ನಂಬದೆ, ತಿರುಗಿ ನೋಡಿದೆ! ಅವಳ ದೃಷ್ಟಿಶರವು ನನ್ನ ಕಡೆ ಮೊಗಮಾಡಿತ್ತು. ಬಾಂಧವ್ಯದ ತಂತಿಯು ಅವಳ ಮಂದಸ್ಮಿತದಲ್ಲಿ ಒಡೆದುಕಾಣುತ್ತಿದ್ದಿತು—ಅದು ನನ್ನನ್ನು ಸುಖಿಸಿತು. ನಡೆಯಲಾರದ ನಡತೆಯು ನನ್ನನ್ನು ಹೆಬ್ಬಾಗಿಲಿನಿಂದ ಹೊರದೂಡಿತು. ಅವಳು ನನ್ನನ್ನು ಕಂಡೊಡನೆ ಪ್ರಸನ್ನ...ಯಾಗಿ ಹೃದಯವನ್ನು ಬಿರಿದಳೇಕೆ?-ಅವಳಾರು? ಎಂಬ ಸಮಸ್ಯೆಗಳು ಶಿರಸ್ಸು ಭೇದಿಸುವಂತಾಯಿತು. ನುಗ್ಗಿನುಸುಳುತ್ತಿದ್ದ ಜನಜಯವು ದೃಷ್ಟಿಗೋಚರವಾಗದು; ಆಗ ಕಂಡ ಶ್ರೀಕೃಷ್ಣ ಭಗವಾನನ ಸುಂದರ ಮೂರ್ತಿಯು ಮನೋನಯನಕ್ಕೂ ಕಂಡುಬಾರದು! ಜಗತ್ತೇ ಅವಳ ರೂಪಮಯ! ಶಾಂತವಾಗಿ ಹರಿಯುತ್ತಿದ್ದ ಮನೋಸರೋವರವು ವಿಚಿತ್ರ ಭಾವನೆಗಳ ನೆರೆಯಿಂದ ಕಲ್ಮಶಭರಿತವಾಯಿತು! ಇದೂ ಒಂದು ಅವನ ಲೀಲೆಯೇ? ಲಲನೆಯರ ನಗೆಯು ದೀಪವು ನಂದಿಹೋಗಲಿ!

ಮರೆಯಲಾರದುದನ್ನು ಮರೆಯ ನಿರ್ಧರಿಸಿ ನಡೆದೆ.... ಚಪ್ಪರದ ಬಳಿ ಸಾರಿ, ಮನೆಯುತ್ತ ಕಡೆ ನಡೆಯಲೋ—ಎಂಬ ಆಲೋಚನೆಯ ತ್ರಿಶಂಕು ಸ್ವರ್ಗದಲ್ಲೇ ಇದ್ದು, ಬಗ್ಗಿದ ತಲೆಯನ್ನು ಮೇಲಕ್ಕೆತ್ತಲು, ನನ್ನ ಬಲಪಾರ್ಶ್ವದಲ್ಲಿ ಕೆಂಪು ಸೀರೆಯೊಂದು ಹೊಳೆಯಿತು! ನೋಡಲು—ಅವಳೇ! **ಅವಳು!!**

ನೋಡಿಯೂ ನೋಡದಂತೆ, ತಿಳಿದೂ ತಿಳಿಯದಂತೆ ಮುಂದೆ ನಡೆಯುವ ಅವಸರವನ್ನು ಪ್ರದರ್ಶಿಸುತ್ತಿದ್ದಳು. ನಾಯಿಗಳಿಂದ ಮುತ್ತಲ್ಪಟ್ಟ ಹರಿಣದ ಮನೋಸ್ಥಿತಿಯವಳದಾಗ. ಸುಮಾರು ಏಳು ವರ್ಷ ಪ್ರಾಯದ ಸುಂದರ ಬಾಲಕನೊಬ್ಬನು ಅವಳ ಕೈಯನ್ನು ಹಿಡಿದುಕೊಂಡಿದ್ದನು. ಬಳಿಯ ಮಿಠಾಯಿ ಅಂಗಡಿಗೆ ಕಣ್ಣಿಟ್ಟಿದ್ದ.

ನಿಂತಲ್ಲೆ ನಿಂತು ನೋಡಿದೆ; ಹುಡುಗನನ್ನೆಚ್ಚರಿಸಿ ನನ್ನನ್ನು ತೋರಿಸಿದಳು. ಕಂಗಾಲಾದೆ. ನನ್ನಲ್ಲಿ ನನಗೆ ಲಜ್ಜೆಯೆದ್ದು ತಳಮಳಿಸುತ್ತಿದ್ದಾಗ, ಬಾಲಕನು ನನ್ನ ಬಳಿ ನಿಂತುಕೊಂಡನು. ಅವನೊಡನೆ ಅವಳೂ ಬಂದಳು. ಸಹೋದರನ ಬಳಿ ಸಹೋದರಿಯು ನಿರ್ಮಲಾಂತಃಕರಣಳಾಗಿ ನಿಲ್ಲುವಂತೆ,—ತಂದೆಯ ಬಳಿ ಮಗಳು ಶುದ್ಧಮನಸ್ಕಳಾಗಿ ನಿಲ್ಲುವಂತೆ,—ಅವಳು ನನ್ನನ್ನು ಸಮೀಪಿಸಿ ನಿಂತಳು! ಏನಾಗಬೇಕು, ಈ ದುರ್ಬಲ—ಪಾಪಿ ಮನಸ್ಸು? ಕನಸಿನ ಭೂಮಿಯೋ ಎಚ್ಚರದ ಸತ್ಯಘಟನೆಯೋ ಎಂದು ನಿರ್ಧರಿಸಲಾರದಾದೆ!

ನನ್ನನ್ನು ತಿಳಿದ ಅವಳು ಅಸ್ಪಷ್ಟರಲ್ಲಿ ಹೇಳಿದಳು—„ನಾವು ಮನೆಗೆ ಹೋಗುತ್ತೇವೆ....."

ಮೂಡದ ನಗೆಯನ್ನು ಮೂಡಿಸಿ ನಾನುತ್ತರವಿತ್ತೆ—„ನಾನೂ ಹೋಗಬೇಕೆಂದಿದ್ದೇನೆ". ಹೇಳಿ, ಕ್ಷಣದಲ್ಲಿ ಚಿಂತಿಸಿದೆ—"ಹೋಗು" ಎಂದೇಕೆ ಹೇಳಲಿಲ್ಲ—ಎಂದು!

„ಹಾಗಾದರೆ ಹೋಗೋಣ" ಎಂದಳು.

ಧೈರ್ಯತಂದುಕೊಂಡು—„ಆಗಬಹುದು" ಎಂದು ಸ್ವೀಕೊಟ್ಟೆ. ಹೊರಡಬೇಕೆಂದು ಕಣ್ಣನ್ನು ಮುಂದೆ ಹಾಯಿಸಿದಾಗ, ಸುತ್ತುಮುತ್ತಲಿಂದ ಹಲವು ನೇತ್ರಗಳು ನಮ್ಮನ್ನು ಸುಡುವಂತೆ ಕಂಡಿತು.

ಕಂಗಾಲುರಾಜ್ಯದಲ್ಲಿ ಭಿಕಾರಿಯಂತಾಗಿ, ತಿಳಿದೂ ತಿಳಿಯದಂತಹವನಾಗಿ ಅವಳೊಡನೆ—ಆ ಬಾಲಕನ ಕರವನ್ನು ಹಿಡಿದು ಹೊರಗೆ ನಡೆದೆ. ನೋಡುತ್ತಿದ್ದ ಕಣ್ಣುಗಳು ಹಿಂಸರಿದವು.

ಹಿಂಡುಗಟ್ಟಿ ದೇವಸ್ಥಾನಕ್ಕೆ ಬರುವ ಜನಸಂದಣಿಯನ್ನು ಮಾರ್ಗವಿಡೀ ಕೊರೆದುಕೊಂಡು ಹೊರಗಾದೆವು. ಅವಳಿಗೆ ನಿರ್ದಿಷ್ಟ ಗುರಿಯಿದ್ದಿರಬಹುದು; ಆದರೆ ನನ್ನ ಗುರಿ ಮನೆಯಾಗಿರಲಿಲ್ಲ. ನಡೆದೆವು..... ನಡೆಯುತ್ತ ಯೋಚಿಸಿದೆ—"ನಮಗೆ ಪುರುಷರಿಗೆ, ಸೌಂದರ್ಯವತಿಯರನ್ನು ಕಂಡಾಗ ಅಂತರ್ಯದಲ್ಲೊಂದು ಲಜ್ಜೆ! ಬೇಡವಾದ ಲಜ್ಜೆ ಬೇಕೆಂದು ಮೂಡಿ ಮನಮುರಿಯುತ್ತಿದೆ. ಕೆಲವರು ಓರೆನೋಟದಿಂದ ಸ್ತ್ರೀಯರನ್ನು ನೋಡುವರು; ಕೆಲವರು ಎರಡು ತುಟಿಗಳನ್ನು ಒಂದಾಗಿಸಿ ದಿಕ್ಕುಗೆಟ್ಟು, ಹೆಜ್ಜೆತಪ್ಪಿ ಸಮತೂಕ (poise)ವನ್ನೂ ಮರೆತು ಅವರನ್ನು ಕಾಣುವರು. ಇದಕ್ಕೆ ಕಾರಣ? ನನ್ನ ವರ್ತನೆಗೂ ಕಾರಣ?—ಪುರುಷಹಿಂಸನ ಆತ್ಮದಲ್ಲಿ

ರುವ ಕಲಂಕ ಭಾವನೆಯು ಹಸಿವು—ಭಿನ್ನಭಾವನೆಯ ತೃಷೆ-ಆಜನ್ಮ ಹೃದಯ ದೌರ್ಬಲ್ಯ! ಕೆಸರಿನ ಗೋಡೆಯನ್ನು ಕಟ್ಟಬಾರದು; ಅದು ಕುಸಿಯುವುದು ಬೇಗ. ಕಲ್ಲಿನ ಗೋಡೆಯು ಶಾಶ್ವತ; ಅಪವಿತ್ರ ಚಿಂತನೆಯು ಹೃದಯವನ್ನು ಕಲುಷಿತಗೊಳಿಸುತ್ತದೆ; ಶುದ್ಧವಿಚಾರವು ಮನಮಂದಿರವನ್ನು ಶುಚಿರ್ಭೂತವಾಗಿಡುತ್ತದೆ. ರೂಪಿಣಿಯರನ್ನು ಕಂಡೊಡನೆ ಮನಸ್ಸು ಕದಡಬೇಕೇಕೆ? ಅಂತರ್ಯ ಬಾಹ್ಯಗಳ ಸಮತೂಕವು ಅಳಿಯಬೇಕೇಕೆ? ಎಲೋ ಆತ್ಮ ಶುದ್ಧನಾಗು!"

ಮನದ ಮಲಿನತೆಯು ಹರಿದು ನೈರ್ಮಲ್ಯದ ಜ್ಞಾನ - ವಿವೇಕ ಸಮಾಧಾನಗಳು ಬೆಳಗಲು, ನಾನು ಧೈರ್ಯವಂತನಾದೆ.

ಬರಬರುತ್ತಾ ಮಾರ್ಗದಲ್ಲಿ ಜನಸಂಖ್ಯೆಯು ಕಡಿಮೆಯಾಯಿತು. 11 ಘಂಟೆ ರಾತ್ರಿಯ ಹಿಂದೆ ಒಂದೂವರೆ ಮೈಲು ದಾರಿ ನಿಂತಿತು. ಸಂಧಿ ನೋಡಿ ಮನದ ಬಲವನ್ನು ಕೈಯಲ್ಲೆತ್ತಿ ಹಿಡಿದು ನುಡಿದೆ:—"ಮನೆಯೆಲ್ಲಿ?"

"ಕಾಳಮ್ಮ ದೇವಸ್ಥಾನದ ಬಳಿ,—ರುದ್ರಯ್ಯನವರ ಮನೆಯೆದುರು . . . . . ."

"ಈ ಮಗ"

"ನನ್ನ ಮಗ ವಸಂತ"

"ಇವನ ತಂದೆ ಬರಲಿಲ್ಲವೋ?"

ಈ ಪ್ರಶ್ನೆಗೆ ಉತ್ತರವಿಲ್ಲ. ನಾಲ್ಕು ಹೆಜ್ಜೆ ನಡೆದಾದ ಬಳಿಕ ಪುನಃ ಕೇಳಿದೆ—"ಇವನ ತಂದೆಯವರು ಬರಲಿಲ್ಲ?"

ನಿರುತ್ತರ! ಏನೋ ಮೋಸವಿದೆಯೆಂದು ಭಾವಿಸಿಕೊಂಡೆ— ಆದರೂ ಕಾಳಮ್ಮ ದೇವಸ್ಥಾನದ ಬಳಿ ರುದ್ರಯ್ಯನವರ ಪರಿಚಿತಿಯ ಮನೆಯಿದೆ; ಅಲ್ಲಿಯವಳು ಇವಳು; ಇದರಲ್ಲೇನೋ ಗೂಢಾರ್ಥವಿದೆಯೆಂದು ತಿಳಿದು, ಬಾಲಕನ ಕೈಹಿಡಿದು ನಡೆಸುತ್ತಾ ಮುಂದಾದೆ. ಹುಲ್ಲೆಯ ಮರಿಯು ತಾಯಿಯ ಹಿಂದೆ ಓಡಿ ಬರುವಂತೆ ಅವಳು ಬೆಂಬಿಡದೆ ಬರುತ್ತಿದ್ದಳು.

ಮತ್ತೊಮ್ಮೆ ಪ್ರಶ್ನಿಸುವೆನೆಂದು ತುಟಿದೆರೆದಾಗ, ಅವಳಿಂದಲೇ ಬಂತು— "ಮನೆಗೆ ಹೋಗೋಣ, ಎಲ್ಲವನ್ನೂ ಹೇಳುವೆನು" ಎಂಬುತ್ತರ.

ಸಣ್ಣಮನೆ: ಬೆಂಕಿಕಡ್ಡಿಯ ಹೊಡೆತದಿಂದ ಕಗ್ಗತ್ತಲೆಯು ಮಾಯವಾಯಿತು. ಕಾಲ್ದೊತ್ತಿದೆ. ಎದರು ಕೋಣೆಯಲ್ಲಿ ಯಾರೋ ಮಲಗಿದ್ದಂತೆ ತೋರಿತು. "ಅದು ನನ್ನ ಅಜ್ಜಿ" ಎಂದಳು ಅವಳೆ. ಮಣೆ ಬಂತು–ಕುಳಿತೆ; ಮಗನಿಗೆ ಚಾಪೆ ಹಾಸಿಕೊಟ್ಟಳು. ಅವನು ನಿದ್ರಾದೇವಿಯ ಜೋಗುಳವನ್ನು ಕೇಳ ತೊಡಗಿದನು. ಎರಡು ತಟ್ಟೆಗಳಲ್ಲಿ ಬಿಸಿನೀರು ತಂದು ನನ್ನೆದುರು ಇಟ್ಟಳು. ಹಾಗೆಯೇ ಹೋಗಿ, ಅಜ್ಜಿಯನ್ನೆಬ್ಬಿಸಿದಳು. ಕಣ್ಣೊರಸುತ್ತಾ ಅಜ್ಜಿಯು ಎದ್ದು ನನ್ನ ಬಳಿ ಬಂದು, ಮೊಗವನ್ನು ಇಣಿಕಿ ಇಣಿಕಿ ನೋಡಿದಳು. ಆಶ್ಚರ್ಯಚಕಿತಳಾಗಿ ಒಮ್ಮೆ ಅವಳನ್ನು ದಿಟ್ಟಿಸಿ ನೋಡಿದಳು; ಒಮ್ಮೆ ಸುತ್ತುಮುತ್ತಲೂ ನೋಡಿದಳು ಬೆರಗಾಗಿ, ಬಾಯ್ತೆರೆದು, ಅಬ್ಬರಿಸಿ, "ರುಕ್ಮಿಣಿ! ಯಾರನ್ನೋ ಕರೆತಂದಿರುವಿ?" ಎಂದಳು.

ರುಕ್ಮಿಣಿಯೆಂದಳು—"ಇವರೇ ಅವರು . . ."

ಮುದುಕಿ - "ಯಾರು? . . . ."

ರುಕ್ಮಿಣಿ—"ನಮ್ಮ ಧನಪತಿಯನ್ನು ಇನ್ಶೂರಿಗೆ ಸೇರಿಸಿದವರು" ನನ್ನ ನೆನಪಿನ ಕನ್ನಡಿಯಲ್ಲಿ 'ಹೌದು' ಎಂಬ ನಿಜದ ರೂಪು ಕಂಡಂತಾಯಿತು. ಹೌದು! ಧನಪತಿ ಎಂಬ ತರುಣನನ್ನು—ಪಿಯರ್ಸ್‌ಲೆಸ್ಲಿ ಕಂಪೆನಿಯ ರೈಟರನೊಬ್ಬನನ್ನು - ಈ ವಠಾರದಲ್ಲಿ ಅದೊಮ್ಮೆ ಮಿಸಿಂಗ್ ಸೇರಿಸಿದ್ದು. ಇದವನ ಮನೆಯಾಗಿರಬಹುದು—ಎಂದು ಸ್ಮರಣರಾಜ್ಯದಲ್ಲಿ ತಿರುಗಾಡುತ್ತಿದ್ದಾಗ, ಮುದುಕಿ ಹೇಳಿದಳು:—"ಹೌದಪ್ಪಾ, ಹೇಗೂ ಮಾಡಿ ಆ ಮೂರು ಸಾವಿರ ರೂಪಾಯಿ ತೆಗೆಸಿಕೊಡಿ. ಕಾಗದ ಪತ್ರ ನಮ್ಮಲ್ಲಿಯೇ ಇವೆ; ಅಸ್ವಸ್ಥದಲ್ಲಿದ್ದಾಗಲೇ ಬೊಂಬಾಯಿಂದ ಅವನು ನಮಗೆ ಕಳುಹಿಸಿದ. ನಿಮ್ಮನ್ನೇ ಹುಡುಕುತ್ತಿದ್ದೆವು; ಅವನೊಬ್ಬ ಸೀತಾರಾಮು. ಇವಳ ಗಂಡ! ಬೇಡವೆಂದರೂ ಆಫ್ರಿಕಕ್ಕೆ ಹೋದ. ಸಾಲಗಾರರು ಕತ್ತು ಹಿಸುಕಿ ನಮ್ಮ ಗತಿ ಹೀಗೆ ಮಾಡಿದರು. ಅವರ ಮನೆ ಹಾಳಾಗ!"

ರುಕ್ಮಿಣಿಯ ಆಶಾಪೂರ್ಣ ನೇತ್ರಗಳು ನನ್ನ ಹಣೆ ಕಣ್ಣುಗಳೊಡನೆ ದ್ವಂದ್ವಕ್ಕಾರಂಭಿಸಿದ್ದುವು. ಎಂದಳು—"ತಿಳಿಯಿತಲ್ಲ! ಆ ದಿವಸ ನನ್ನ ತಮ್ಮ ಧನಪತಿಯನ್ನು ನೀವು ಇದೇ ಮನೆಯಲ್ಲಿ ಒತ್ತಾಯದಿಂದ ಮಿನುಗಿಳಿಸಿದಿರಿ. ನೀವು ಅವನಿಗೆ ಕೊಡುತ್ತಿದ್ದ ಉಪಟಳವನ್ನು ಕಂಡು, ಅಂದು ನಾನೇ ಜಿಗುಪ್ಸೆಗೊಂಡಿದ್ದೆನು. ನೀವೇನೋ ಸಾಲ ಪಡೆಯುವ ಮೋಸದ ಬಲೆಯನ್ನು ಅವನ ಮೇಲೆ ಬೀಸುತ್ತಿರುವಿರೆಂದು ನೆನೆದಿದ್ದೆ. ಅವನು ಬೊಂಬಾಯಿಗೆ ವರ್ಗವಾಗಿ ತೀರಿಕೊಂಡು ನಾಲ್ಕು ತಿಂಗಳಾದುವು. ಮರಣವು ಸಮೀಪಿಸಿದುದನ್ನು ತಿಳಿದು, ಪೊಲಿಸಿಯನ್ನು ಅವನೊಬ್ಬಳೇ ಅಕ್ಕನಾದ ನನ್ನ ಹೆಸರಲ್ಲಿ ಸಹಿಮಾಡಿ ಕಳುಹಿಸಿಕೊಟ್ಟ. ಆದರೆ ಮಾಡಲೇನು? ಇದನ್ನು ಯಾರಿಗೆ ತೋರಿಸಲಿ? ಸುತ್ತುಮುತ್ತ ಸಾಲಗಾರರು! ಐದು ವರ್ಷಗಳಿಂದ ಬಾಡಿಗೆ ಕೊಟ್ಟಿರುವುದಿಲ್ಲ. ನಮ್ಮ ದುರ್ಗತಿಯನ್ನು ನೋಡಿ ದನಿಯವರು ಮರುಗುತ್ತಿದ್ದಾರೆ. ಅವರು ಆಫ್ರಿಕಕ್ಕೆ ಹೋಗುವ ಮೊದಲು ಬೇಕಾದಂತೆ ದುಡಿದು, ಮಾಡಿಸಿಕೊಟ್ಟ ಚಿನ್ನಗಳು ವಿಚ್ಛಿನ್ನವಾಗಿ ಯಾರ್ಯಾರ ಪಾಲಾದುವು. ಉಳಿದಿರುವುದು— ಅವರ ಕರುಳು ಒಂದು; ಧಾರೆಯ ಸೀರೆಯೊಂದು. ದೇವರನ್ನು ನಂಬಿ, ಸ್ಥೈರ್ಯವನ್ನು ಹೊಂದಿ ದಿನಹರಣ ಮಾಡುತ್ತಿದ್ದೇವೆ. ಆಫ್ರಿಕದಲ್ಲಿ ಅವರ ಕೆಲಸ ಹೋಗಿ ಒಂದು ವರ್ಷವಾಯಿತು. "ದಾರಿದ್ರ್ಯವು ಪ್ರಾಣ ತಿನ್ನುತ್ತದೆ-ಊರಿಗೆ ಬರಬೇಕೆಂದಾಶೆಯಿದ್ದರೂ ಕೈಯಲ್ಲಿ ಚಿಕ್ಕಾಸಿಲ್ಲ. ಸಾಲ ತೀರಿಸಿ ಬರಬೇಕಾದರೆ 1000 ರೂಪಾಯಿ ಬೇಕು; ಪ್ರಾಣತ್ಯಾಗ ಮಾಡಬೇಕೋ?" ಎಂದು ಬರೆಯುತ್ತಿದ್ದಾರೆ. ಆದುದರಿಂದ ಹೇಗೂ ಮಾಡಿ . . . ."

ಈ ಕುಟುಂಬದ ದುರ್ಗತಿಯ ಅರಿವು ನನಗಾಯಿತು. ನಿಜವಾಗಿಯೂ ಸ್ಥಿತಿ ಕರುಣಾಜನಕ! ಪೊಲಿಸಿಯ ಹಣವನ್ನು ತೆಗೆಸಿಕೊಡುವೆನೆಂದು ಅವರಿಗೆ ಆಶ್ವಾಸನೆಯಿತ್ತನು.

ನಾನು ಹೊರಡುವಾಗ ರುಕ್ಮಿಣಿಯು ಪುನಃ ದೈನ್ಯವಾಗಿ ಹೇಳಿದಳು:— "ಆದರೆ ಈ ಹಣ ದೊರೆತುದುದು ಸಾಲಗಾರರಿಗೆ ತಿಳಿದರೆ ನಮ್ಮ ನಾಶ . . . . ."

* * * * * * * *

ರುಕ್ಮಿಣಿಗೆ ಈಗ ಮೂವರು ಮಕ್ಕಳಿರುವರು. ಅವಳ ಪತಿಯು ಮಂಗಳೂರಲ್ಲಿ ಪ್ರಸಿದ್ಧ ವರ್ತಕ. ದೊಡ್ಡ ಮನೆ ಕಟ್ಟಿಸಿರುತ್ತಾನೆ. ಸುದಿನಗಳು ಕುಟುಂಬವನ್ನು ಕಂಡು ನಗುತ್ತಿವೆ. ರಾಮಚಂದ್ರಮೂರ್ತಿಯು ನನ್ನನ್ನು ಕಂಡ ಕಂಡಾಗ ಹೇಳುತ್ತಾನೆ—"ನಿಮ್ಮ ಸಹಾಯವೇ ದೈವಸಹಾಯ; ಮನುಷ್ಯನ ದಿನಗಳು ಭಾವನೆಯನ್ನು ಮೀರಿದ ಅದೃಷ್ಟದ ಕೈಯಲ್ಲಿ; ಕಷ್ಟ ಕಾಲಕ್ಕಾಗಿ ನಾನು 10,000 ವಿಮೆ [illegible]."

ಮುರಿದ ಮುರಲಿ

ಮನದಿ ರುದ್ರನಾಟ್ಯವಾಗೆ.
ನೆನೆವೆ ಮಸಣಭೂಮಿಯಾಗೆ-
ದಣಿದ ತನುವಿನುಸುರೆ ತನುವ
ದಹಿಪ ಅಗ್ನಿಜ್ವಾಲೆಯಾಗೆ-
ಮುರಲಿನಾದ ಮನಕೆ ಶಾಂತಿ
ಯೆರೆಯುತಿದ್ದಿತು!
ಅವಳ ಮುರಲಿ ಮುರಿಯಿತು-
ಶಾಂತಿಯುಡಗಿತು!!

ಒಡಲು ಹಸಿವೆಯಿಂದ ಮೊರೆಯೆ-
ಹೃದಯ ಬಿರಿದು ಮಳೆಯು ಸುರಿಯೆ-
ಮುರಲಿನಾದ ಅಳುವನಳಿಸಿ
ನಗಿಸುತಿದ್ದಿತು!!
ಅವಳ ಮುರಲಿ ಮುರಿಯಿತು-
ನಗುವದಡಗಿತು!!

ನರಕದೊಳಗೆ ನಾಕವೆರೆಸಿ-
ಮರುಕದೊಳಗೆ ಸುಖವ ಕುಣಿಸಿ-
ಹರುಷವೀವ ಅವಳ ಮುರಲಿ
ಎಂತೊ ಮುರಿಯಿತು!
ಮೌನಶಾಂತಿ ಸುಖಗಳಾಶೆ
ಅಂದೆ ಅಡಗಿತು!
ಅವಳ ಮುರಲಿ ಮುರಿಯಿತು-
ಶಾಂತಿಯಳಿಯಿತು!!

ಕುರುಡು ಕಣ್ಣು ತೆರೆದ ಮುರಲಿ!
ಹರುಷವೀಯುತಿರುವ ಮುರಲಿ
ತೆರೆದ ಕಣ್ಣನಿಂದು ಮುಚ್ಚಿ
ಹಾಳು ಗೋಳ ಬಾಯಿ ಬಿಚ್ಚಿ-
ಮುರಿದೆ ಹೋಯಿತು!
ಮೌನಗೀತೆಯುಡಗಿ ರುದ್ರ
ನಾಟ್ಯವಾಯಿತು!
ಅವಳ ಮುರಲಿ ಮುರಿಯಿತು-
ತನುವು ಬೆಂದಿತು!!

ಅವಳ ಮುರಲಿ ಮುರಿದು ಹೋಗೆ-
ಅವಳ ಹೃದಯ ಬಿರಿದು ಹೋಗೆ-
ಅವಳೆ ಸಾವನಿದಿರುಗೊಳಲು
ಮರುಕವಾರಿಗೆ?
ಅವಳ ಮುರಲಿ ಮುರಿದು ದಾರಿ
ತೋರದಾಯಿತು!
ಅವಳ ಮುರಲಿ ಮುರಿಯಿತು-
ಬಾಳು ಕೆಟ್ಟಿತು!!

ಮುರಿದ ಮುರಲಿ ದನಿಯ ಕೊಟ್ಟು
ಮರುಕ ದುಃಖಗಳನು ಸುಟ್ಟು
ಹರುಷವೀಯುವನಕ ಗೋಳ
ಹೇಳಿ ತೀರದು!
ಮುರಿದ ಮುರಲಿ ಹಾಡದು-
ಹಸಿವು ಹಿಂಗದು!
ಅವಳ ಮುರಲಿ ಮುರಿಯಿತು-
ದೇಹ ಕುಸಿಯಿತು!!

ನೀಲಾಂಗ, ಪುತ್ತೂರು.

ಕಾಲಕ್ಷೇಪ(?)

ಲೇಖಕ:—ಕಾಪು ಮಂಜುನಾಥ ಶೆಣೈ

'ಕಾಲಕ್ಷೇಪ'ವೆಂದರೆ ಕಾಲಹರಣವೆಂದು ಅರ್ಥ. ಕಾಲಕ್ಷೇಪಕ್ಕೆ ಅನೇಕ ದಾರಿಗಳಿವೆ: ಸುಮ್ಮನಿದ್ದು ಕಾಲ ಕ್ಷೇಪ; ಸಾಲ ತಂದು ಕಾಲಕ್ಷೇಪ; ಪಿತ್ರಾರ್ಜಿತವನ್ನು ಮಾರಿ ಕಾಲಕ್ಷೇಪ; ವ್ಯಾಪಾರದಿಂದ ಕಾಲಕ್ಷೇಪ; ಬೇಡಿ ತಿಂದು ಕಾಲಕ್ಷೇಪ! ಕೂಲಿ ಕೆಲಸದಿಂದ ಕಾಲಕ್ಷೇಪ. ದಲ್ಲಾಳಿಗಳಾಗಿ ಕಾಲಕ್ಷೇಪ. ಇಲ್ಲದ್ದನ್ನು ಇದ್ದಂತೆ, ಇದ್ದ ದ್ದನ್ನು ಇಲ್ಲದಂತೆ ಮಾಡಿ ತೋರಿಸಿ ಕಾಲಕ್ಷೇಪ; ಉದ್ಯೋಗ ನೌಕರಿಗಳಿಂದ ಕಾಲಕ್ಷೇಪ; ಹೀಗೆ ವಾಡಿಕೆಯಲ್ಲಿ ಇನ್ನೂ ಎಷ್ಟೋ ತರದ ಕಾಲಕ್ಷೇಪಗಳಿವೆ. ಇವುಗಳಲ್ಲಿ ಈ ಕಾಲ ಕ್ಷೇಪವು ಸೇರಿಲ್ಲವೆಂಬುದಕ್ಕೆ ಆಕ್ಷೇಪವಿಲ್ಲ. ಅಂತಾದರೆ ಈ ಚಿತ್ರದ ತಲೆಬರಹದ ಹಣೆಬುರುಡೆಯಲ್ಲಿ 'ಕಾಲಕ್ಷೇಪ?' ವೆಂದು ಬರೆದುದು ಯಾವ ಪ್ರಕ್ಷೇಪಕ್ಕಾಗಿ? ಅದು ಹರಿ ಕಥಾ ಕಾಲಕ್ಷೇಪ! ಈ ಕ್ಷೇಪಕ್ಕೆ ಅಷ್ಟೊಂದು ಪ್ರಾಮುಖ್ಯತೆ ಯಾವುದಕ್ಕಾಗಿಯೆಂಬುದನ್ನು ವಿಚಾರಿಸುವುದು ನಮ್ಮ ಕರ್ತವ್ಯ! ಇದಿಷ್ಟು ಪ್ರಸ್ತಾವನೆ!!

ದೊಡ್ಡ ಬಳ್ಳಾಪುರದಲ್ಲಿ ದೊಡ್ಡಯ್ಯ ಸೆಟ್ಟರೆಂದರೆ ದೊಡ್ಡವರೇ. ಊರಲ್ಲಿ ಸಾಲು ಜಮೀನುಳ್ಳ ಮಹತೋ ಭಾರ (?)ರೂ ಅವರೇ. ಸೆಟ್ಟರು ಗಿಡ್ಡು ಮನುಷ್ಯರಾದರೂ ಅವರ ಗಡ್ಡವು ಅವರನ್ನು ಗುಡ್ಡದಷ್ಟು ದೊಡ್ಡವರಾಗಿ ಒಡ್ಡಿ ತೋರಿಸುತ್ತಿತ್ತು. ಮೈಬಣ್ಣ ಅಚ್ಚ ಕಪ್ಪಾಗಿದ್ದರೂ, ಈಗಲೇ ನೊಂದಿಸಿದ ಮಸಿ ಕೆಂಡದ ಹೊಳಪಿನಂತೆ ಥಳಥಳ! ಜಮೀನ್ದಾರನಾಗಿ ಅವರ ಉಣ್ಣೆಯ ಕೋಟು ಅವರನ್ನು ಕಣ್ಣು ಕುಕ್ಕಿಸುವಂತೆ ಮಾಡುತ್ತಿತ್ತು. ಇಷ್ಟೆಲ್ಲಾ ವರ್ಣನೆ ವಿಷ್ಣುಮೂರ್ತಿ ದೇವಸ್ಥಾನದ ಅವರ ಮೊಕ್ತೇಸರಿ ಸ್ಥಾನಕ್ಕಾಗಿ. ಊರಲ್ಲಿಯೂ ದೇವಸ್ಥಾನದಲ್ಲಿಯೂ ದೊಡ್ಡಯ್ಯ ಸೆಟ್ರು ಒಂದು ಮಾತು ಆಡಿದರೆಂದರೆ ಇತರರು ದಡ್ಡತನದಿಂದ ಮೂಕರಾಗಿ ವಿಚಾರ ವಿಮರ್ಶೆ ಮಾಡದೆ ಮೌನಸಮ್ಮತಿ ಕೊಡುತ್ತಿದ್ದರು. ಇತ್ತೀಚೆಗೆ ಯಾವುದೋ ಒಂದು ನ್ಯಾಯ ಇತ್ಯರ್ಥಕ್ಕಾಗಿ ದೇವ ಸ್ಥಾನದಲ್ಲಿ ಊರವರು ಸಭೆಸೇರಿದರು. ಸಭೆ ಚದರುವ ಸಮಯ ದೊಡ್ಡಯ್ಯ ಸೆಟ್ರು 'ಈ ವರ್ಷ [illegible]

ಮೂರ್ತಿ ದೇವಸ್ಥಾನದಲ್ಲಿ ಜಾಲ್ಸೂರು ಮಾಧವ ದಾಸರಿಂದ ಹರಿಕಥೆ ಮಾಡಿಸಬೇಕೆಂದು ಗಡ್ಡ ಅಲ್ಲಾಡಿಸುತ್ತಾ ಠರಾವು ತಂದರು. ಉಳಿದವರು ಸೊಡ್ಡು ತಿರುಗಿಸುತ್ತಾ ಒಪ್ಪಿದರು. ಊರಲ್ಲಿ ಬೇಸಾಯ ಮುಗಿಯುತ್ತಾ ಬಂತು. ಮಳೆ ಗಾಲಕ್ಕೆ ಬೇಕಾದ ಸಾಹಿತ್ಯಗಳೆಲ್ಲಾ ರೈತರ ಕಣಜಗಳಲ್ಲಿ ತುಂಬಿದುವು. ಅಷ್ಟೆನ್ನುವಾಗ ವರ್ಷಾಕಾಲವು ಸನ್ನಿಹಿತ ವಾಯಿತು. ಜನರು ತಮ್ಮ ಶಕ್ತಿಮೀರಿ ಕೈತುಂಬಾ ವರಾಡ ವಂತಿಗೆಗಳನ್ನು ಸೆಟ್ರ ಚಾವಡಿಯಲ್ಲಿ ಒಪ್ಪಿಸಿದರು. ದೊಡ್ಡಯ್ಯ ಸೆಟ್ರು ತಮ್ಮ ಆಳು ಬಸವನನ್ನು ಕಾಗದ ಕೊಟ್ಟು ಜಾಲ್ಸೂ ರಿಗೆ ಕಳುಹಿಸಿದರು. ಮಾಧವ ದಾಸರು ಹರಿಕಥೆಯ ದಿವಸ ನಿಶ್ಚಯಮಾಡಿ, ತನಗೆ ತಿಳಿಸಬೇಕೆಂತಲೂ ಆ ದಿನ ತಾನು ಖಂಡಿತವಾಗಿ ಬರುತ್ತೇನೆಂತಲೂ ಹೇಳಿ ಕಳುಹಿಸಿದರು. ದೊಡ್ಡಯ್ಯ ಸೆಟ್ರು ಭಟ್ರ ಕೂಡೆ ಮುಹೂರ್ತ ಕೇಳಿದರು. ಆಷಾಢ ಮಾಸದ ಶುದ್ಧ ಪ್ರತಿಪದೆಯ ದಿನ ಹರಿಕಥೆಯೆಂದು ನಿಶ್ಚಯವಾಗಿ, ಮಾಧವ ದಾಸರಿಗೆ ಹೇಳಿಕಳುಹಿಸಿದರು. ದಾಸರು, ಜನರೆಲ್ಲಾ ಸಭೆ ಸೇರಿ ಹರಿಕಥೆಗೆ ತಯಾರು ಮಾಡಿದ್ದಲ್ಲಿ, ಹೊತ್ತಿಗೆ ಸರಿಯಾಗಿ ವಿಷ್ಣು ಮೂರ್ತಿ ದೇವ ಸ್ಥಾನಕ್ಕೆ ಬರುತ್ತೇನೆಂದು ಹೇಳಿಕಳುಹಿಸಿದರು.

ಆಷಾಢ ಮಾಸದ ಶುದ್ಧ ಪ್ರತಿಪದೆಯ ದಿನ ರಾತ್ರಿ ಏಳು ಘಂಟೆಗೆ ದೇವಸ್ಥಾನದ ಹೊರ ಅಂಗಳದಲ್ಲಿ ಊರ ವರು ನೆರೆದರು. ಮಳೆಯು ಮುತ್ತಿನ ಹನಿಗಳಂತೆ ತೊಟ್ಟಿಕ್ಕು ತ್ತಿದ್ದಿತು. ಅಲ್ಲಲ್ಲಿ ಕಪ್ಪೆಗಳು ಮುದುಕರ ನಿದ್ರೆಯ ಸುಯ್ಲಿ ನಂತೆ ಗುಟುರು ಹಾಕುತ್ತಿದ್ದುವು. ಅದು ಕಾರಣ ಮಳೆ ಬಲವಾಗಿ ವರ್ಷಿಸಬಹುದೋ ಎಂಬ ಸಂಶಯದಿಂದ ಊರ ವರು ಮೇಲ್ಗುಡಿಯ ಹನುಮಂತನಿಗೆ ಹರಕೆ ಹೇಳಿಕೊಂಡರು. ಅಂತರಿಕ್ಷದಲ್ಲಿ ಮಳೆ ಮೋಡಗಳು ಒಂದೊಂದಾಗಿ ಚದರಿ, ಮಳೆ ನಿಂತಿತು. [illegible]
[illegible]
[illegible]
[illegible]
[illegible]
[illegible]

ಹೊರ ಪೌಳಿಯಲ್ಲಿ ಲೋಡಿಗೆ ಒರಗಿ, ವೀಳ್ಯ ಜಗಿಯುತ್ತಾ, ಚಕ್ಕಂದವಾಡಿ ನಡುವೆ ವಿಲಕ್ಷಣವಾಗಿ ನಕ್ಕು, ಫಕ್ಕನೆ ಅಂತರಂಗವಾಡಿ ಕಾಲಕ್ಷೇಪ ಮಾಡುತ್ತಿದ್ದರು. ನಾರಾವಿ ಹೆಗ್ಗಡೇರು ತಮ್ಮ ವಜ್ರದ ಉಂಗುರವನ್ನು ಗಳಿಗೆಗೊಮ್ಮೆ ಮೇಲು ಕೆಳಗೆ ಮಾಡುತ್ತಿರುವಾಗ ದೊಡ್ಡಯ್ಯ ಸೆಟ್ರು ತಮ್ಮ ವಜ್ರದ ಒಂಟಿಯ ಕಿವಿಗಳನ್ನು ಅಡಕತ್ತರಿಯಿಂದ ತುರಿಸುವ ಪ್ರಯೋಗ ನಡೆಸುತ್ತಿದ್ದರು. ಆದಿರಾಜ ಅಜಿಲರು ತಮ್ಮ ಚಿನ್ನದ ಬಳೆಯ ಬಲ ಕೈಯನ್ನು ಮುಖದ ಸಮೀಪ ಕೊಂಡು ಹೋಗಿ ತಮ್ಮ ಮಹತೋಭಾರಿಕೆಯ ಪ್ರದರ್ಶನ ನಡೆಸುತ್ತಿದ್ದರು. ಕಾಲ್ದೀಪದ ಸಮೀಪ ಅರ್ಚಕ ದಾಮೋದರಾಚಾರ್ಯರು ಪದ್ಮಾಸನ ಹಾಕಿ ಮಂಡಿಸಿದ್ದರು.

ಅಷ್ಟರಲ್ಲಿ ಮಾಧವದಾಸರು ಲಗುಬಗೆಯಿಂದ ಬಂದು, ದೇವಸ್ಥಾನದ ಅಂಗಳವನ್ನು ಪ್ರವೇಶಿಸಿದಾಗ, ಹರಿದಾಸರು ನಿಲ್ಲುವ ಸ್ಥಳಕ್ಕಿಂತ ಎತ್ತರದ ಚಾವಡಿಯಲ್ಲಿ ಚಕ್ರಾಸನ, ಪದ್ಮಾಸನ, ವೀರಾಸನಗಳನ್ನು ಕಂಡರು. ಅವರಿಗೆ ಈ ರೀತಿಯ ಉನ್ಮತ್ತತೆಯಿಂದ ನಿರುತ್ಸಾಹವೂ, ಸಿಟ್ಟೂ ಪ್ರಗಲ್ಭವಾಯಿತು. ಆದರೆ ಅದನ್ನು ಹೊರಪಡಿಸಲಿಕ್ಕೆ ಸಾಧ್ಯವಿದೆಯೇ? ಅದೂ ಪರವೂರು. ಊರವರೆಲ್ಲ ದೊಡ್ಡಯ್ಯ ಸೆಟ್ರ ಗಡ್ಡವನ್ನು ಕಂಡು ಹೆದರುತ್ತಾರೆಂದು ಅವರಿಗೆ ಮೊದಲೇ ಗೊತ್ತು! ಆಮಂತ್ರಣ ಕೊಟ್ಟವರಾದರೂ ಸೆಟ್ಟರೇ! ಹೀಗಿರುವಾಗ, ದಾಸರು ಉಭಯಸಂಕಟಕ್ಕೀಡಾದರು. ಆಗಲೇ ಒಂದು ಯುಕ್ತಿ ಹೊಳೆಯಿತು.—ಎಷ್ಟೆಂದರೂ ನಾನಾ ತರದ ಉಪಕಥೆಗಳನ್ನು ಸೃಷ್ಟಿಸುವ ಹರಿದಾಸರಲ್ಲವೇ?- ತಮ್ಮ ಬುದ್ಧಿವಂತಿಗೆಯ ಬತ್ತಳಿಕೆಯಿಂದ ಒಂದು ಬಾಣ ಎಸಗಿ ನೋಡೋಣವೆಂದು, ದೊಡ್ಡಯ್ಯ ಸೆಟ್ರ ಕೂಡೆ,—“ಸ್ವಾಮೀ, ಸೆಟ್ಟರೇ, ಈ ಸಭೆಗೆ ದೀಪ ಯಾಕಯ್ಯಾ! ಎಣ್ಣೆ ಹೆಚ್ಚಾಗಿಯದೋ? ದೊಡ್ಡ ದೊಡ್ಡ ಮಹಾಶಯರು ವೀರಾಸನ, ಪದ್ಮಾಸನಗಳಿಂದ ಪ್ರಣಾಯಾಮ ಮಾಡುವಾಗ ಹೊರಟ ಚಿತ್ಪ್ರಕಾಶದಿಂದ ದೇವಸ್ಥಾನವೇ ಬೆಳಗಿ ಹೋಗಿರುವಾಗ ಈ ದೀಪ ಯಾವ ಕರ್ಮಕ್ಕಾಗಿ? ತೆಗೆಯಿರಿ, ತೆಗೆಯಿರಿ!” ಎಂದು ನಂಜಿನ ಮಾತನ್ನು ವ್ಯಂಗ್ಯಭಾವದಿಂದ ಮನಮುಟ್ಟುವಂತಾಡಿದರು. ಈ ಮಾತಿನ ಹುರುಳು ಅಲ್ಲೇ ಇದ್ದ ಯಕ್ಷಗಾನ ಅರ್ಥಧಾರಿಗಳಾದ ಕೆಂಚಣ್ಣೊಡೆಯರಿಗೆ ತಿಳಿದು, ಅವರು ದೊಡ್ಡಯ್ಯ ಸೆಟ್ರ ಬಳಿಗೆ ಹೋಗಿ ‘ನೀವು ಮೇಲೆ ಕುಳಿತುಕೊಂಡದ್ದನ್ನು ಕಂಡು ಹರಿದಾಸರಿಗೆ ಬೇಸರವಾಗಿರಬೇಕು. ಅದಕ್ಕಾಗಿ ಅವರು ಈ ಮಾತುಗಳನ್ನಾಡಿದರೆಂದು ಕಾಣುತ್ತದೆ. ನೀವು ಕೆಳಗಿನ ಚಾಪೆಯಲ್ಲಿ ಮಂಡಿಸಬಹುದಷ್ಟೆ’ ಎಂದರು. ಇದನ್ನು ಸೆಟ್ಟರು ಕೇಳಿ—ಸಮಾಧಾನ ತಾಳಿ, ಎಲ್ಲರನ್ನೂ ‘ಏಳಿ, ಏಳಿ,’ ಎಂದು ಹೇಳಿದಾಗ, ಚಾವಡಿಯಲ್ಲಿಯಲ್ಲಿದ್ದವರೆಲ್ಲಾ ಕೆಳಗಿನ ಚಾಪೆಗೆ ಬಂದರು. ಆ ಮೇಲೆ ಹರಿದಾಸರು ಹಿಮ್ಮೇಳಗಳ ಸಮ್ಮೇಳನದಿಂದ ಸುಸಜ್ಜಿತರಾಗಿ ಕಥಾರಂಭವಾಯಿತು.

‘ಚಂದ್ರಹಾಸ ಚರಿತ್ರ’ವೇ ಆ ದಿನದ ಕಥೆ. ಚಂದ್ರಹಾಸನಿಗೆ ಕಾಡಿನಲ್ಲಿ ಬೆರಳು ಕತ್ತರಿಸಿಬಿಟ್ಟ ಸಾರಾಂಶ ಬಂತು. ಅಷ್ಟು ಹೊತ್ತಿಗೆ ದೀಪದ ಸಮೀಪ ಕುಳಿತುಕೊಂಡಿದ್ದ ಅರ್ಚಕ ಮಾಧವಾಚಾರ್ಯರಿಗೆ ಕಣ್ಣುಕೂರಿ, ತಲೆದೂಗುತ್ತಾ ಗೆಣಸಿನ ತೂಕಕ್ಕೆ ಆರಂಭವಾಯಿತು. ಹರಿದಾಸರು ಸಂದರ್ಭಾನುಸಾರ ಮಾಧವಾಚಾರ್ಯರ ಸಮೀಪ ಬಂದು,

ನಾಮ ಒಂದೇ ಸಾಲದೇ । ಗೋವಿಂದನ ।
ನಾಮ ಒಂದೇ ಸಾಲದೇ ॥ ಅ. ಪ. ॥

ಎಂಬ ಪದ್ಯ ಹಾಡಿದರು. ಆಗ ಅರ್ಧ ನಿದ್ದೆಯಲ್ಲಿದ್ದ ಅರ್ಚಕರು ಹಾರಿಬಿದ್ದು, “ದೊಡ್ಡಯ್ಯ ಸೆಟ್ರೇ ನಾನು ತಗೆದೆ. ಉಂಟು ಸೆಟ್ರೇ ಉಂಟು” ಎಂದು ವಿಕಟವಾಗಿ ಕೂಗಿದರು. ಸಭೆಯವರು ಬೆಚ್ಚಿ ಬೆದರಿದರು- ಎಲ್ಲರೂ ‘ಏನು? ಏನಾಯ್ತು?’ ಎಂದು ತಮ್ಮ ತಮ್ಮೊಳಗೆ ತರ್ಕಿಸುತ್ತಾರೆ ಹೊರತು, ಒಬ್ಬರಿಗೂ ನಿಜಸ್ಥಿತಿ ಗೊತ್ತಾಗಲಿಲ್ಲ. ದೊಡ್ಡಯ್ಯ ಸೆಟ್ರು ಎದ್ದು ಬಂದು, ‘ಭಟ್ರೇ ಏನು? ನಿಮಗೇನಾಗುತ್ತಿದೆ?’ ಎಂದು ಕೇಳಿದರು. ಭಟ್ರು ದೊಡ್ಡಯ್ಯ ಸೆಟ್ರ ಕೂಡೆ, ‘ಸೆಟ್ರೇ, ಮೊನ್ನೆ ನಾನು ತಮ್ಮ ಕೂಡೆ ದೇವರ ವಿಗ್ರಹದ ಚಿನ್ನದ ನಾಮ ಕಳವಾಗಿದೆಯೆಂದು ಹೇಳಿದ್ದೇನಷ್ಟೆ. ಅದು ನನ್ನ ಹತ್ರ ಉಂಟು. ನಾನೇ ತಗೆದೆ. ಈ ವಿಷಯ ನೀವು ಬಲ್ಲವರಾಗಿ ಹರಿದಾಸರ ಕೂಡೆ ಹೇಳಿ, ಕೂಡಿದ ಸಭೆಯಲ್ಲಿ ಅವರಿಂದ ಪದ ಕಟ್ಟಿಸಿದ್ದೇ ನನ್ನ ತಪ್ಪಿಗೆ ಶಿಕ್ಷೆ ಸಾಕು. ಈಗಲೇ ತಂದು ಕೊಡುತ್ತೇನೆ ಮಹಾರಾಯರೇ’ ಎಂದು ಕಣ್ಣೀರು ಸುರಿಸಿ, ಅಲ್ಲೇ ಸಮೀಪದ ತನ್ನ ಬಿಡಾರಕ್ಕೆ ಓಡಿದರು.

ಈ ಭಟ್ರಿಗೆ ದೇವರ ನಾಮ ಕಳವುಮಾಡುವಾಗ ಮಾನಾಭಿಮಾನಗಳ ಗೊಡವೆ, ಸ್ವಾರ್ಥದ ರಾಶಿಯಲ್ಲಿ ಹುಗಿದುಹೋಗಿತ್ತೋ ಏನೋ? ಈಗ ಮಾತ್ರ ಬಹಳ ನಾಚಿಕೆ! ಪರಂತು ಪೇಟೆಯಲ್ಲಿ ಮೂಗು ಕೊಯ್ದವರಿಗೆ ಹಳ್ಳಿಯಲ್ಲಿ ನಾಚಿಗೆಯೇನಯ್ಯ? ಇಂಥಾ Monkey Brand ಮನುಷ್ಯರು ಏನೆಲ್ಲಾ ಮಾಡಲಿಕ್ಕಿದೆಯೋ ಯಾರು ತಾನೇ ಬಲ್ಲ!

ಸಭೆಯಲ್ಲಿ ಗದ್ದಲವಾಯಿತು. ಕೆಳಪೇಟೆಯ ಸಿದ್ಧೇಗೌಡರು ಕಾಣಿಕೆ ಒಪ್ಪಿಸಿದ ನಾಲ್ಕು ಪವನಿನ ಚಿನ್ನದ ನಾಮ ಈಚೆಗೆ ಕಳವಾಗಿದೆಯೆಂದು ಆಚಾರ್ಯರು ದೊಡ್ಡಯ್ಯ ಸೆಟ್ರಿ ಕೂಡೆ ತಿಳಿಸಿದ್ದಾರೆ. ಸೆಟ್ರು ಪೋಲೀಸರಿಗೆ ತಿಳಿಸಿ, ಪತ್ತೆ ನಡೆಯುತ್ತಾ ಇದೆ. ಈಗ, ತಾನೇ ತೆಗೆದೆನೆಂದು ಹೇಳುತ್ತಾರೆ. ಹೀಗೆ, ಅರ್ಚಕರೇ ದೇವರನ್ನು ವಂಚಿಸಿದರೆ ದೇವರಿಗೆ ನಗನಾಣ್ಯ ಒಪ್ಪಿಸುವುದು ಬಹಳ ಕಷ್ಟವಾಯಿತೆಂದು ಆಡಿಕೊಳ್ಳುತ್ತಿದ್ದರು.

ಅರ್ಚಕರು ತಮ್ಮ ಮಗನನ್ನು ನಾಮಕೊಟ್ಟು ಕಳುಹಿಸಿದರು. ಮಗನು ದೊಡ್ಡಯ್ಯ ಸೆಟ್ರ ಕೈಗೆ ನಾಮ ಒಪ್ಪಿಸಿದನು. ಹರಿಕಥೆ ಹೇಗೂ ಮುಕ್ತಾಯವಾಯಿತು. ಪುನಃ ಕುಂಭದ್ರೋಣವಾಗಿ ಮಳೆಗೆ ಆರಂಭ. ಜನರು ಈ ಕಠಿಣ ಮುಂಗಾರು ಮಳೆಗೆ ಕಂಗಾಲಾಗಿ, ಹಿಂಗಾಲಿನಿಂದ ಬೆಂಗಾಲು ಕೊಟ್ಟು ಮನೆಸೇರಿದರು.

ಮರುದಿನ ಕಳವಿನ ಮ್ಹಾಲು ಸಿಕ್ಕಿದ ವೃತ್ತಾಂತವನ್ನು ಪೋಲೀಸರಿಗೆ ತಿಳಿಸಬೇಕಷ್ಟೆ. ದೊಡ್ಡಯ್ಯ ಸೆಟ್ರು ನಾಮ ಹಿಡಕೊಂಡು, ಪೋಲೀಸ್ ಠಾಣೆಗೆ ಹೋಗಿ ನಡೆದ ಪ್ರಸಂಗವನ್ನೆಲ್ಲಾ ತಿಳಿಸಿದರು. ಅಷ್ಟರಲ್ಲಿ ಪೋಲೀಸ್ ಇನ್ಸ್ಪೆಕ್ಟರರು ಸ್ವಲ್ಪ ಆಲೋಚಿಸಿ "ಸೆಟ್ರೇ, ಅರ್ಚಕನೂ ಕಳ್ಳನೇ, ಹರಿದಾಸನೂ ಕಳ್ಳನೇ! ಇಬ್ಬರೂ ಒಟ್ಟುಗೂಡಿ ಈ ನಾಮ ಅಪಹರಿಸಿದರೆಂದು ಕಾಣುತ್ತದೆ. ಹರಿದಾಸನಿಗೆ ಪಾಲು ಕೊಡದ ಕಾರಣ ಹರಿದಾಸ ಹೀಗೆ ಹೇಳಿದನೆಂದು ಖಚಿತವಾಗುತ್ತದೆ. ಅದುಕಾರಣ ಇಬ್ಬರನ್ನೂ ಕೈದು ಮಾಡಬೇಕೆಂದು ಹೇಳಿ ಜವಾನರನ್ನು ಕಟ್ಟಿಕೊಂಡು ಹೋಗಿ, ಇಬ್ಬರನ್ನೂ ಕೈದುಮಾಡಿ ಠಾಣೆಗೊಯ್ದರು. ಅನಂತರ ಕೈದಿನವರನ್ನು ನ್ಯಾಯಾಧೀಶರ ಮುಂದೆ ನಿಲ್ಲಿಸಿ ನಂಬ್ರ ವಿಚಾರಣೆಗೆ ಆರಂಭವಾಯಿತು. ಹರಿದಾಸನನ್ನು ವಿಚಾರಿಸುವಾಗ 'ಸ್ವಾಮೀ, ನಾನೇನೂ ಈ ಊರವನಲ್ಲ. ನಾನಿರುವುದು ಜಾಲ್ಸೂರಿನಲ್ಲಿ. ಈ ಅರ್ಚಕರ ಪರಿಚಯು ನನಗಿರುವುದಿಲ್ಲ. ದೊಡ್ಡಯ್ಯ ಸೆಟ್ರ ಆಮಂತ್ರಣದಂತೆ ನಾನು ಬಂದದ್ದು. ಹರಿಕಥೆ ಮಾಡುವಾಗ ಅರ್ಚಕರು ಕಾಲುದೀಪದ ಸಮೀಪ ಕಣ್ಣು ಕೂಗುತ್ತಿದ್ದರು. ಆಗ ಚಂದ್ರಹಾಸನ ಬೆರಳು ತುಂಡು ಮಾಡಿ, ಕಾಡಿನಲ್ಲಿ ಬಿಟ್ಟ ಸಮಯ ಅವನು ದೇವರ ನಾಮ ಸ್ಮರಣೆಯಿಂದ ಸೌಖ್ಯ ಹೊಂದಿದನೆಂಬಲ್ಲಿ, ದೇವರ ನಾಮದ ಮಹತ್ವಿಕೆಯನ್ನು

ನಾಮ ಒಂದೇ ಸಾಲದೇ। ಗೋವಿಂದನ।
ನಾಮ ಒಂದೇ ಸಾಲದೇ॥ ಅ. ಅ.॥

ಯೆಂದು, ಅರ್ಚಕರನ್ನು ನಿದ್ದೆಯಿಂದೆಬ್ಬಿಸಲಿಕ್ಕೆ ಅವರ ಮುಖದ ಸಮೀಪ ಹಾಡಿ ಹೊಗಳಿದೆನಷ್ಟೆ. ಆಗ ಅರ್ಚಕರು ಕೂಗಿದರು. ಆ ಮೇಲೆ ನಡೆದ ವಿಷಯಗಳೆಲ್ಲಾ ದೊಡ್ಡಯ್ಯ ಸೆಟ್ರು ಬಲ್ಲರು. ವಿನಹಾ ನಾಮದ ಕಳವನ್ನು ನಾನು ತಿಳಿದವನೇ ಅಲ್ಲ. ನನಗೆ ಆಗ ತಾನೆ ಗೊತ್ತಾದ್ದು" ಎಂದು ಹೇಳಿದರು. ದೊಡ್ಡಯ್ಯ ಸೆಟ್ರ ವಿಚಾರಣೆಗೆ ಆರಂಭವಾಯ್ತು. ದೊಡ್ಡಯ್ಯ ಸೆಟ್ರು 'ಹರಿದಾಸರು ಹೇಳಿದ್ದೆಲ್ಲವೂ ನಿಜ. ಅವರು ನಿರಪರಾಧಿಗಳೆಂದು ಸರಿಯಾಗಿ ವಿವರಿಸಿ ಹೇಳಿದರು.

ನ್ಯಾಯಾಧೀಶರು ತೀರ್ಪುಕೊಡುವಾಗ ಹರಿದಾಸರ ಹೇಳಿಕೆ ವಾಸ್ತವವಾಗಿರಬೇಕೆಂತಲೂ,ಜಮೀನ್ದಾರ ದೊಡ್ಡಯ್ಯ ಸೆಟ್ರ ಸಾಕ್ಷಿ ಸ್ವೀಕಾರಕ್ಕೆ ಯೋಗ್ಯವಾದುದೆಂತಲೂ ಹೇಳಿ, ಅರ್ಚಕರಿಗೆ ಎರಡು ವರ್ಷಗಳ ಕಠಿಣ ಕಾರಾವಾಸ ವಿಧಿಸುವೆನೆಂದು ಹೇಳಿದರು. ಹರಿದಾಸರನ್ನು ಕೈದು ಮಾಡಿದುದು ಆಕ್ಷೇಪಕರವೆಂತಲೂ, ಅವರ ಹಾಡಿನಿಂದ ಈ ಕಳವಿನ ಸೊತ್ತು ಸಿಕ್ಕಿದ ಕಾರಣ ಸರಕಾರದಿಂದ ನೂರು ರೂಪಾಯಿ ಬಹುಮಾನ ಕೊಡಿಸೋಣಾಗುತ್ತದೆಂತಲೂ ಹೇಳಿದರು.

ದಾಸರಿಗೆ ಸಂತೋಷವಾಯಿತು. ಅವರು ಮರುದಿನ 'ಸಿಕ್ಕಿದ್ದೇ ಮಕ್ಕಳ ಪುಣ್ಯ'ವೆಂದು ಬಹುಮಾನದ ನೂರು ರೂಪಾಯಿ ಬಗಲಿಗೆ ಕಟ್ಟಿಕೊಂಡು, ಹರಿಕಥೆಯ ಫೀಸನ್ನು ದೊಡ್ಡಯ್ಯ ಸೆಟ್ರಿಂದ ಪಡೆದು ಜಾಲ್ಸೂರಿಗೆ ತೆರಳಿದವರು ಮತ್ತೆ ದೊಡ್ಡ ಬಳ್ಳಾಪುರಕ್ಕೆ ಬರಲೇ ಇಲ್ಲ.

ಹರಿದಾಸರು ಆ ದಿನ ದೊಡ್ಡ ಬಳ್ಳಾಪುರದ 'ಕಾಲಮೇಘ' ಪತ್ರಿಕೆಯೊಂದನ್ನು ಜಾಲ್ಸೂರಿನಲ್ಲಿ ಪಡೆದರು. ಅದರಲ್ಲಿ ಒತ್ತಿದ ದಪ್ಪಕ್ಷರಗಳಿಂದ.

ದೇವರ ನಾಮದ ಕಳವು!

ಹರಿದಾಸರಿಂದ ಪತ್ತೆ! ಅವರಿಗೆ ನೂರು ರೂಪಾಯಿ ಬಹುಮಾನ!! ಅರ್ಚಕನೇ ಕಳ್ಳ!!!

ಎಂದು ಬರೆದ ವಾರ್ತೆಯನ್ನೋದಿ ಹಿಗ್ಗಿ ಹದಿನಾರಾದರು. ನಕ್ಕು ನಚ್ಚಾದರು. ಹಾಗೂ ಹೀಗೂ ಈ ಹರಿಕಥಾ ಕಾಲಕ್ಷೇಪದಿಂದಾಗಿ ಕಳೆದು ಹೋದ ದೇವರ ನಾಮ ಸಿಕ್ಕಿತು. ಪೋಲೀಸರಿಗೆ ಪತ್ತೆಯ ಕೆಲಸ ಸುಲಭವಾಯಿತು. ಮತ್ತೇನಾಗಬೇಕು? ಹರಿದಾಸರಿಗೆ ಆ ದಿನ ಹರಿಕಥಾ ಕಾಲಕ್ಷೇಪ. ಎರಡು ದಿನ ಕೈದಿನಲ್ಲಿ ಕಾಲಕ್ಷೇಪ. ಕೊನೆಗೆ ಬಹುಮಾನದ ನಿಕ್ಷೇಪ. ಹೀಗಿರುವಾಗ ಕೈದಿನ ಕಾಲಕ್ಷೇಪಕ್ಕೆ ಅವರೇಕೆ ಆಕ್ಷೇಪಿಸುತ್ತಾರೆ???

(ಜನೇ ಪುಟದಿಂದ ಮುಂದುವರಿದುದು.)

ಸಿದ್ಧ ತ್ಯಾಗಿಗಳೂ ಜನಿಸಿರುತ್ತಾರೆ. ನನ್ನಂತವಳ ಜೀವನವೇ ನಿಜವಾದ ನಾರೀಜೀವನವು. ಕೊನೆಯದಾಗಿ ಹೇಳುವುದಾದರೆ ನಾರೀ ಜೀವನವೆಂಬುದು ಪವಿತ್ರ ಪ್ರೇಮದ ಇತಿಹಾಸವಾಗಿರುತ್ತದೆ. ನಾರಿಯ ಹೃದಯಮಂದಿರವು ಪ್ರಾರಂಭದಲ್ಲಿ ಮಾತಾಪಿತೃಗಳ, ಆ ಮೇಲೆ ಪತಿಯ, ತದನಂತರ ಪುತ್ರಪುತ್ರಿಯರ ಈ ರೀತಿ ತರತರ ಪ್ರೇಮತರಂಗಗಳಿಂದ ತುಂಬಿರುತ್ತದೆ. ನಾರೀ ಸ್ನೇಹವು ಪುರುಷನ ವಿಶ್ರಾಂತಿದಾಯಕವೂ ಆಲಸ್ಯದ ನಿವಾರಣವೂ ವಿರಾಮಕಾಲದಲ್ಲಿ ಚಿತ್ತವಿನೋದ ಮಾಡುವಂಥಾದ್ದೂ ಆಗಿರುತ್ತದೆ. ಸ್ನೇಹದಲ್ಲಿಯೇ ಅವಳ ಜೀವನವೂ, ನಿವಾಸವೂ, ಕೊನೆಗೆ ಮೃತ್ಯುವೂ [illegible] ಸಿರುತ್ತದೆ. ಈ ತರದ ಪವಿತ್ರ ನಾರೀಜೀ[illegible] ಗೊಳಿಸುವ ಮಾನವರು ಲೋಕದಲ್ಲಿ [illegible] ಯನ್ನು ಹೊಂದುವರು."

ಸಿಂಹಗಡ

ಲೇಖಕ: ಅ. ರಾಮಚಂದ್ರ ಪೂಣೆ.

ಹಿಂದುಸ್ಥಾನವು ಕೋಟೆಕೊತ್ತಲ ಮಹಲ್ ಮಸೀದಿ ಗುಹೆ ಗಂಪ್ವರ ದೇವಾಲಯಗಳಿಗೆ ತವರು ಮನೆ ಇದೆ. ನಮ್ಮ ಆ ಹಿಂದಿನ ಹಿಂದೂಸ್ಥಾನವು ಎಂತು ಶೋಭಿಸುತ್ತಿತ್ತೆಂದು ಇಂದಿಗೂ ಅಳಿದುಳಿದ ಕೋಟೆಕೊತ್ತಳಗಳ ದೃಶ್ಯವು ತಿಳಿಯಲೆಳಸುವುವು.

ಸಿಂಹಗಡವು ಛತ್ರಪತಿ ಶಿವಾಜಿಗೆ ಸೇರಿದುದು. ಅದು ಪೂಣೆಯಿಂದ ಹದಿನೈದು ಮೈಲು ದೂರದಲ್ಲಿರುವುದು. ಅದನ್ನು ಏರಿ ಹೋಗಬೇಕಾದರೆ ಪೂರ್ಣ ಒಂದು ತಾಸು ಬೇಕಾಗುವುದು. ಕಲ್ಲಿನಿಂದಲೇ ಕಟ್ಟಿದ, ಎತ್ತರವಾದ ಮೂರು ಬಾಗಿಲನ್ನು ದಾಟಿ ಒಳ ಹೊಕ್ಕರೆ ವಿಶಾಲವಾದ ಪ್ರಸ್ತಭೂಮಿಯು ಕಾಣುವುದು. ತಲೆ ಎತ್ತಿ ನಾಲ್ಕೆಡೆಗಳಿಗೆ ನೋಡಿದರೆ, ಎತ್ತರೆತ್ತರವಾದ ಗುಡ್ಡಗಳು ಕಾಣುವುವು. ನಿಜವಾಗಿಯೂ ಈ ಗುಡ್ಡಗಳ ದೃಶ್ಯವು ಅತೀ ಮನೋಹರವಾದದು.

ಮೂರನೇ ಬಾಗಿಲನ್ನು ದಾಟಿ ಹತ್ತಿಪ್ಪತ್ತು ಹೆಜ್ಜೆಗಳನ್ನು ಏರಿ ಹೋದರೆ, ಕಲ್ಲಿನಿಂದಲೇ ಕೊರೆದುದೊಂದು ಗುಹೆಯು ಕಾಣುವುದು ಅದು ಅಂದಿನ ಅಶ್ವಾಲಯವಂತೆ. ಇದರೊಳಗೆ ಇನ್ನೂರು ಕುದುರೆಗಳನ್ನು ಕಟ್ಟುವಷ್ಟು ಸ್ಥಳವಿರುವುದು. ಗಾಳಿ ಸಂಚಾರಕ್ಕೆ ಬೇಕಾದ ಏರ್ಪಾಡುಗಳಿರುವುವು. ಹಾಗೆಂದು, ಮೇಲಿನಿಂದ ನೋಡುವವರಿಗೆ ಅದು ಅಷ್ಟೊಂದು ವಿಶಾಲವಾದ ಅಶ್ವಾಲಯವೆಂದು ಕಾಣಬರದು.

ಇದನ್ನು ದಾಟಿ ಮುಂದಕ್ಕೆ ಹೋದರೆ, ಕಲ್ಲಿನ ಮೇಲೆ ಕೊರೆದ ಎರಡು ಸಣ್ಣ ಪ್ರತಿಮೆಗಳು ಕಾಣುವುವು. ಒಂದು ಪ್ರತಿಮೆಯು ತಾನಾಜಿಯದು. ಇನ್ನೊಂದು ಸತೀ ಕಮಲಕುಮಾರಿಯದು. ತಾನಾಜಿ, ಕಮಲಕುಮಾರಿಯರ ಪ್ರತಿಮೆಗಳು ಸಿಂಹಗಡದಲ್ಲಿ ಸ್ಥಾಪಿತವಾಗಲು ಕಾರಣವೇನೆಂದು ಮರಾಠ ಚರಿತ್ರೆಯನ್ನು ಬಲ್ಲವರಿಗೆ ಚೆನ್ನಾಗಿ ತಿಳಿದಿರುವುದು. ಸ್ವಾಮಿಭಕ್ತ ತಾನಾಜಿಯು ಮಗನ ಮದುವೆಗೆ ಶಿವಾಜಿಯನ್ನು ಆಮಂತ್ರಿಸಲು ಶಿವಾಜಿಯಲ್ಲಿಗೆ ಹೋದಾಗ, ಉದಯಭಾನು ಸಿಂಹಗಡಕ್ಕೆ ಬಂದಿದ್ದನು ಇದರಿಂದ ಶಿವಾಜಿಯು ಕಷ್ಟಕ್ಕೀಡಾಗಿರುವನೆಂಬುದನ್ನು ತಿಳಿದು ಉದಯಭಾನು ಕೂಡಲೇ ಸಿಂಹಗಡಕ್ಕೆ ಧಾವಿಸಿದನು. ಅಂತು ಸಿಂಹಗಡವು ಶಿವಾಜಿಯ ವಶಕ್ಕೆ ಬಂತಾದರೂ, ತಾನಾಜಿಯು ಅದೇ ಕಾಳಗದಲ್ಲಿ ಆ ಪ್ರತಿಮೆಯಿರುವ ಸ್ಥಳದಲ್ಲಿಯೇ ಮಡಿದನಂತೆ.

ಇಂದಿಗೂ ಅಲ್ಲಿನ ಮರಾಠರು ಆ ಪ್ರತಿಮೆಯನ್ನು ಪೂಜಿಸುವರು. ನಿಜವಾಗಿಯೂ ಪೂಜ್ಯ ವಿಗ್ರಹವದು. ತಾನಾಜಿಯಂತಹ ಸ್ವಾಮಿಭಕ್ತ ಸ್ವದೇಶಾಭಿಮಾನಿ, ವೀರಾಗ್ರೇಸರನನ್ನು ಪೂಜಿಸದಿದ್ದರೆ, ಮತ್ತಾರನ್ನು ಪೂಜಿಸಬೇಕು?

ಆ ಪ್ರತಿಮೆಗಳ ಪಕ್ಕದಲ್ಲಿರುವುದೊಂದು ಕೊಳ. ಅದನ್ನು ದೇವಕೊಳವೆನ್ನುವರು. ಆ ಕೊಳದ ನೀರು ಎಷ್ಟೊಂದು ಆರೋಗ್ಯಕರವಾದುದೆಂದು ಮಹತ್ಮಾಜೀಯವರ ಉಪವಾಸವನ್ನು ಬಲ್ಲವರೆಲ್ಲರೂ ತಿಳಿದಿರಬಹುದು. ಪರದೇಶದ ನೀರಿನ ಬದಲಾಗಿ, ಸಿಂಹಗಡದ ದೇವಕೊಳದ ನೀರನ್ನೇ ಕುಡಿದು ಮಹತ್ಮಾಜೀಯವರು ತನ್ನ ವ್ರತವನ್ನು ಪೂರೈಸಿದರು.

ತಾನಾಜಿಯ ಪ್ರತಿಮೆಯನ್ನು ದಾಟಿ ಮೇಲೆಕ್ಕೇರಿ ಹೋದರೆ, ಅಲ್ಲೊಂದು, ಕಲ್ಲಿನ ಮೇಲೆ ಚಿತ್ರಿಸಿದ ಕೈ ಕಾಣುವುದು. ಆ ಸ್ಥಳದಲ್ಲಿಯೇ ತಾನಾಜಿಯು ತನ್ನ ಕೈಯನ್ನು ಕಳೆದುಕೊಂಡನಂತೆ. ತಾನಾಜಿಯು ಕೈ ಕಳಕೊಂಡ ಸ್ಥಳಕ್ಕೂ ಮಡಿದ ಸ್ಥಳಕ್ಕೂ ಮುನ್ನೂರು ಅಡಿಗಳ ಅಂತರವಿರುವುದು. ಒಂದು ಕೈಯಿಂದ ಯುದ್ಧ ಮಾಡುತ್ತಾ ಮುನ್ನೂರು ಅಡಿಗಳ ವರೆಗೆ ಮುಂದರಿಸಿ ಹೋಗಬೇಕಾದರೆ ಅವನೆಂತಹ ವೀರನೆಂಬುದು ತಿಳಿದುಬರುವುದು. ಕೈಯ ಪ್ರತಿಮೆಯ ಎಡಭಾಗದಲ್ಲಿ ಮುನ್ನೂರು ಅಡಿಗಳ ಅಂತರಕ್ಕೆ ತಾನಾಜಿಯು ಕೋಟೆಯನ್ನು ಏರಿ ಬಂದ ಸ್ಥಳವು ಕಾಣುವುದು. ಮೇಲಿಂದ ಕೆಳಕ್ಕೆ ನೋಡಿದರೆ ಕಣ್ಣು ಕತ್ತಲೆ ಬರುವುದು. ಅಂದಿನ ಮರಾಠರು ಎಂತಹ ಬಲಾಢ್ಯರು; ಅಂತೆಯೇ ಧೈರ್ಯಶಾಲಿಗಳು. ಕೋಟೆಯ ಇನ್ನೊಂದು ದ್ವಾರವು ಇಲ್ಲೇ ಪಕ್ಕದಲ್ಲಿರುವುದು. ಇದಕ್ಕೆ ಕಲ್ಯಾಣದ್ವಾರವೆನ್ನುವರು. ಶಿವಾಜಿ ಮತ್ತು ಸರದಾರರು ಇದೇ ದ್ವಾರದಿಂದ ಹೊರಗೆ ಬರುತ್ತಿದ್ದರಂತೆ. ಕುದುರೆಯನ್ನೇರಿ ಇಷ್ಟೊಂದು ಎತ್ತರವಾದ ಗಡವನ್ನು ಏರಿ ಬರುತ್ತಿದ್ದರೆಂದು ಕೇಳಿದರೆ ಅಂದಿನ ಮರಾಠರು ಈಗ ಪೂನದಲ್ಲಿರುವ ಮರಾಠರೇ ಎಂಬ ಪ್ರಶ್ನೆ ಹುಟ್ಟುವುದು.

ಶಿವಾಜಿಯ ಮಗ ರಾಜಾರಾಮನು ಇಲ್ಲೇ ಮಡಿದನಂತೆ ಅವನ ಸಮಾಧಿಯ ಮೇಲೆ ದೇವಾಲಯವಿದೆ. ಈಗಲೂ ಪೂಜೆಯು ನಡೆಯುತ್ತಲಿದೆ. ಪೂಜಾರಿಗೆ ಸತಾರದಲ್ಲಿನ ಶಿವಾಜಿ ವಂಶಜರು ಈಗಲೂ ತಿಂಗಳಿಗೆ ಹತ್ತು ರೂಪಾಯಿ ಕೊಡುವರಂತೆ.

ಇನ್ನು ಗಡದ ಮೇಲೆ ನಾಲ್ಕೈದು ಮನೆಗಳಿರುವುವು. ಬೇಸಿಗೆ ಕಾಲದಲ್ಲಿ ಧನಿಕರು ವಿಹಾರಕ್ಕಾಗಿ ಅಲ್ಲಿಗೆ ಹೋಗುವರು.

ತಿರುಕನ ಪ್ರಾರ್ಥನೆ.

ಲೇ:—ಶ್ರೀ. ಬಿ. ಅಣ್ಣು ಉಪಾಧ್ಯಾಯ, ಮೂಲ್ಕಿ

ಬಡವನು ನಾನೈ ಸಲಹುವ ದಾತರು
ಇಲ್ಲವೆ ಜಗದಲ್ಲಿ॥
ಕೊಡಿರೆನಗಶನವಸನವನುಡಲಿಕೆ
ಸಾಯ್ವುದೆ ನಾಸಿಲ್ಲಿ॥
ಕಷ್ಟದ ಬಾಳ್ವೆಯನಿತ್ತೆಯ ವಿಶ್ವದ
ತಂದೆಯು ನೀನಾಗಿ॥
ದುಷ್ಟನೆನಾನತಿ ಬಾಳ್ದೆನೆ ಹಿಂದಕೆ
ನಿನಗೆ ಅಹಿತನಾಗಿ॥
ದೂರೆನು ನಿನ್ನನು, ನನ್ನವರೆನ್ನನು
ದೂರಕ್ಕಟ್ಟಿದರು॥
ಊರಿನ ಜನಗಳು ಕಂಡರೆ ದೀನನ
ದೂರಕೆ ಸಾಗುವರು॥
ದೀನದಯಾಳುವು ಲೋಕದ ಜನಕನು
ನೀನಾಗಿರುತಿರುವೆ॥
ದೀನರ ಸೇವೆಯೆ ಈಶನ ಸೇವೆಯು
ಎಂಬುದ ತಿಳಿಸಿರುವೆ॥
ತಿಳಿದರು ಮನುಜರು ಧರ್ಮದ ಹೆಸರಲಿ
ಧನವನು ಗಳಿಸುವರು॥
ಹಲವಿಧ ಪಾಪವ ಗೈದಪರಾಧದ
ಕೂಪವ ಸೇರುವರು॥
ಜನತೆಯ ದೇವಗೆ ನಮಿಸದ ಮಾನವ
ನುನ್ನತಿ ಕುಗ್ಗುವದು॥
ಎನ್ನುವ ಮಾತಿನ ಸಾರವು ಜನರಲಿ
ಮೊಳೆತರೆ ಸುಖವಿಹುದು॥
ನೊಂದೆನು ಬಡತನ ಬೇಗೆಗೆ ಬೆಂದೆನು
ಪೊರೆಯುವರಾರಿಂದು॥
ತಂದೆಯೆ '**ಬಡವರಬಂಧು**' ವೆ ಸದ್ಗುಣ
ಸಿಂಧುವೆ ಬಾ ಮುಂದು॥

TO THE YOUNG MEN AND YOUNG WOMEN OF INDIA.

By Dr. Jabez T. Sunderland.

I am invited by the New History Society, 32 East 65th St., of New York to write you a message, calling your attention to what seems to be a worth-while opportunity for you to do something of value for the cause of peace and religion in the world. As doubtless you already know, you are requested to take part in a competition offered by the New History Society of New York, to obtain the best possible essays written by the young men and women of Asia, in answer to the important question, "How can Youth Contribute to the Realization of a Universal Religion?" It is regarding this that I am invited to write you. I gladly accept the invitation. The following is my message. If the terrible scourge of war is ever to be banished from this world, the spirit of distrust and hostility between nations and races, which now exists so widely must be put away, and a spirit of brotherhood must be created in its place. How can this be done?

It cannot be done without the aid of religion. Religion goes down deeper into human life than does anything else. It is the most powerful of all influences to create love or to create hate, to draw men together or to separate them. So long as there is no religious brotherhood in the world, there can be no other kind that is deep and lasting. But create brotherhood between all the religions, and then international and inter-racial brotherhood will follow, as surely as that day follows night.

The question is asked: How to create religious brotherhood? The answer is: The only way it can be done is by the leaders and followers of all religions pushing aside, rising above, ceasing to emphasize, the little things, the superficial things, the relatively unimportant things of religion, such as names, creeds, forms of worship and the like which for ever divide, and putting their *supreme emphasis*, their *sole* emphasis, upon the great things of religion, the deep things, the vital things, the things of the spirit and life, such as love, kindness, justice, mercy, forgiveness of injuries; compassion toward others, human service of every kind, all of which tend irresistibly to unite men, to draw them together, to create brotherhood. When the leaders and followers of the different religions have done this,—when they have turned from the small, the external, the transient things, to the great and vital things of the heart, the spirit and the life,—then they *will have found* the *universal religion*, the one religion which is the heart of all the religions, the one real, true, vital religion which will destroy war and bring world-peace, because men will then have come to realize that they all belong to one family.

Who must lead in bringing about this vitally important consummation? It must be the *young*. The old cannot do it. They are too much tied to the past. Nor do they possess sufficient strength and daring. But the young possess both, if only they will use them for the right ends.

Happily, in not a few countries they are showing determination to do this. In America,

and in a number of the nations of Europe the young men, and the young women, too, are waking up to a realization that if the world is to be saved, they must lead in saving it. They are beginning to see that never in the whole history of mankind was there a time when such heavy responsibilities rested upon the young, or when such splendid opportunities were offered to them, as now. The world was never so heavily and dangerously armed as today. Armies and navies were never equipped with such irresistible weapons of wholesale slaughter as now. The nations were never within so easy reach of one another as now, if war comes. Nothing, therefore, is more certain than that we must either have peace, and peace founded on the one and only foundation for peace that is worth a straw, namely, *world friendship* and *world brotherhood*, or else there stares us in the face the terrible specter of *world-ruin*, and that at no distant day.

I repeat, if this peril is to be averted, and if the infinitely important boon of world-peace is to be obtained, it must be done largely by the awakened, the strong, the unselfish, the daring, *youth* of the nations.

What can they do? Many things. Just now what seems to be an important opportunity to help is offered to the youth of one great section of the world, namely, the continent of Asia. As stated at the beginning of this message, the opportunity comes in the form of a request to the young men and women of all the Asiatic nations to write out, in brief essays of not more than 2,000 words, their clearest and best thoughts on the important question named,—the essays to be submitted in competition for prizes offered by the New History Society of New York.

There seems little room for doubt that the request will be responded to earnestly in China and Japan. It appears especially fitting that it should be welcomed heartily in in India. For what is India? Beside being the land which, from time immemorial, has been beyond most or all others interested in religion, it is the land of the great Buddha, whose influence for peace in the past, if we may believe history, has never been exceeded, and of the great Mahatma Gandhi, whom all the world unites in proclaiming the greatest influence for peace in the world today. Surely the youth of such a land will not fail to improve every opportunity offered them to help in the cause of world-peace and world-religion.

*The new History Society takes great pleasure in making available to our readers free of charge, a letter, written by Dr. Jabez T. Sunderland, well known authority on the Orient and international relations. This letter concerns the international essay competition offered to the entire youth of Asia, up to the age of thirty, on the subject, "How can Youth Contribute to the Realization of a Universal Religion?"—essays not to exceed 2,000 words.

The final conditions of the competition bearing the names of all the judges, will be mailed in July. The time allowed for the Asiatic contestants will be from August 1, 1934, to February 1, 1935, so that the youth of Asia will have six months' time in which to think and write about the given subject.

(೩ನೇ ಪುಟದಿಂದ ಮುಂದುವರಿದುದು.)

"ಚಿಕಿತ್ಸಿನ್"ಗೆ ಅಭ್ಯಸಿಸಲಿಚ್ಛಿಸುವವರು ಇಂಗ್ಲಿಷನ್ನೇ ಆಗಲಿ ತಮ್ಮ ಭಾಷೆಯನ್ನೇ ಆಗಲಿ ಚೆನ್ನಾಗಿ ಬಲ್ಲವರಾಗಿರಬೇಕು. ಅವರ ಶಿಕ್ಷಣದ ದರ್ಜೆಯನ್ನು ಕುರಿತು ಅವರು ವಿವರವಾಗಿ ಬರೆಯಬೇಕು. ಎಲ್ಲ ಮಾಹಿತಿಗಾಗಿ **ಆಯುರ್ವೇದ ಮಹೋಪಾಧ್ಯಾಯ ಡಾ. ಜಿ. ಕೆ. ಮೂರ್ತಿ ಬಿ. ಎ., ಎಮ್. ಪಿ. ಎಮ್. ಎಸ್., ವ್ಯಾಸ್ ಪ್ರಿನ್ಸಿಪಲ್, ಪಿ. ಎಮ್. ಕಾಲೇಜ್, ತುಂಗಾಭದ್ರಾ, (ಬಳ್ಳಾರಿ** ಡಿಸ್ಟ್ರಿಕ್ಟ್) ಇವರಿಗೆ ಬರೆಯಬೇಕು. ಜೂನ್ ೧೫ನೇ ತಾರೀಕಿನೊಳಗಾಗಿ ಅರ್ಜಿಗಳವರಿಗೆ ಮುಟ್ಟಬೇಕು. ಉತ್ತರಕ್ಕೆ ೧ ಬಿಲ್ಲೆಯ ಸ್ಟಾಂಪ್ ಇಡಬೇಕು.

ಮನೋಹರ

(ಬರೆದವರು:—ಶ್ರೀ ಸ. ವಿ. ಕುಲಕರ್ಣಿ.)

ಸಂಜೆಯ ಐದುವರೆ ಗಂಟೆಯ ಸಮಯ. ಒಮ್ಮೆಲೇ ಮಳೆಯು ಬೀಳತೊಡಗಿತು. ಆಗ ಕೇಳುವುದೇನು? ಎಲ್ಲ ಕಡೆಯಲ್ಲೂ ಗದ್ದಲವೇ ಗದ್ದಲವು. ಕೊಡೆಯುಳ್ಳವರು ಕೊಡೆಗಳನ್ನು ತೆಗೆದರು. ಆದರೆ ಇಲ್ಲದವರು ಹಾಗೆಯೇ ತೋಯ್ಸಿಕೊಳ್ಳುತ್ತ ನಡೆದಿದ್ದರು. ಮಳೆಯು ಒಂದೇ ಸವನೆ ಆನೆಯ ಸೊಂಡಿಯಿಂದ ಸುರವಿದಂತೆ ಬೀಳತೊಡಗಿದ್ದರಿಂದ ಎಲ್ಲೆಲ್ಲಿಯೂ ನೀರೇ ನೀರಾಗಿತ್ತು. ವಿಜಾಪೂರದಲ್ಲಿ ನರಸಿಂಹ ದೇವರ ಗುಡಿಯ ಬಳಿಯಲ್ಲಿ ಎಲ್ಲೆಲ್ಲಿಯೂ ನೀರು ನಿಂತಿದ್ದಿತು.

ದಾರಿಯು ಬಹಳ ಜಾರಿಕೆಯದಾಗಿದ್ದಿತು. ಆದ್ದರಿಂದ ಜನರು ಬಹಳೇ ಎಚ್ಚರದಿಂದ ನಡೆಯುತ್ತಿದ್ದರೂ ಒಬ್ಬಿಬ್ಬರು ಬೀಳದೆ ಇರಲಿಲ್ಲ. ಜಾರಿಕೆಯಾದ ದಾರಿ, ಮೋಟಾರು, ಚಕ್ಕಡಿ, ವಿಕ್ಟೋರಿಯಾ, ಟಾಂಗಾ ಮೊದಲಾದ ವಾಹನಗಳ ಓಡಾಟ, ಇವುಗಳಲ್ಲಿ ದಾರಿ ತೆಗೆದು ಹೋಗುವುದು ಕಠಿಣವಾಗಿತ್ತು. ಕೈಯಲ್ಲಿ ಏನಾದರೂ ಸಾಮಾನುವಿದ್ದರಂತೂ ತೀರಿತು. ಆ ದಾರಿಯೊಳಗಿಂದ ಹಾಯ್ದು ಹೋಗುವುದೆಂದರೆ ಮೃತ್ಯುವಿನ ಬಾಯೊಳಗಿಂದ ಹೊರಬೀಳುವಂತೆಯೇ ಆಗಿತ್ತು.

ಇದೇ ಸಮಯದಲ್ಲಿ ಶಾಲೆಯು ಬಿಟ್ಟದ್ದರಿಂದ ಮಕ್ಕಳು ಒಂದು ಕೈಯಲ್ಲಿ ಹೊತ್ತಿಗೆ, ಇನ್ನೊಂದು ಕೈಯಲ್ಲಿ ಕೊಡೆ ಹಿಡಿದುಕೊಂಡು ನಡೆದಿದ್ದರು. ಇಬ್ಬರು ಹುಡಿಗಿಯರು ಕೃಷ್ಣ ಪಾಠಶಾಲೆಯಿಂದ ಇಂಥ ದಟ್ಟಣೆಯೊಳಗಿಂದ ದಾರಿತೆಗೆಯುತ್ತ ನಡೆದಿದ್ದರು. ಅವರ ಕೈಯೊಳಗಿನ ಸಣ್ಣ ಕೊಡೆಯಿಂದೆಷ್ಟು ಉಪಯೋಗವಾದೀತು? ಇಲ್ಲೆನ್ನಲಿಕ್ಕೆ ಎದೆಗವಚಿಕೊಂಡ ಪುಸ್ತಕಗಳು ಮತ್ತು ತಲೆ ಇಷ್ಟು ಮಾತ್ರ ತೊಯ್ದಿರಲಿಲ್ಲ. ಉಳಿದ ಯಾವತ್ತೂ ಭಾಗವು ತೊಯ್ದುಹೋಗಿತ್ತು. ತೊಯ್ದ ಪತ್ತಲವು ಒಮ್ಮೊಮ್ಮೆ ಕಾಲಿನಲ್ಲಿ ಸಿಕ್ಕುವುದು. ಮೇಲೆ ಆವರಿಸಿಕೊಳ್ಳಲಿಕ್ಕೆ ಬರುವಂತಿರಲಿಲ್ಲ. ಎರಡೂ ಕೈಗಳು ತೆರವಿರಲಿಲ್ಲ. ಇಂಥ ದಟ್ಟಣೆಯೊಳಗಿಂದ ದಾರಿ ತೆಗೆಯುತ್ತ ಅವರು ಪರಸ್ಪರ ನೋಡುತ್ತ ನಗುತ್ತ ನಡೆದಿದ್ದರು

ಅಂಚೇ ಕಟ್ಟೆಯ ಕಂಬದ ಬಳಿಯಲ್ಲಿ ನಿಂತು ದಾರಿಯನ್ನು ನಿರೀಕ್ಷಿಸುತ್ತಿದ್ದರು. ಅವರಿಗೆ ಆ ದಾರಿಯನ್ನು ದಾಟಿ ಹೋಗುವುದಿತ್ತು. ವಾಹನಗಳ ಓಡಾಟ ನೋಡಿ ಅವರಿಗೆ ಆ ದಾರಿ ದುಸ್ತರ ಕಾಣಿಸಿತು. ಹಾಗೂ ಹೀಗೂ ಮಾಡಿ ಅವರು ಹೋಗುವುದಕ್ಕಾಗಿ ನಡೆದರು. ಮುಂದೆ ಹೆಜ್ಜೆಯನ್ನು ಇಟ್ಟಿದ್ದರೋ ಇಲ್ಲವೋ ಅಷ್ಟರಲ್ಲಿಯೇ ಒಂದು ಮೋಟಾರವು ಬಂದಿತು. ಕೂಡಲೇ ಹಿಂತಿರುಗಿದರು. ಆಗ ಲೀಲೆಯು ಕಾಲು ಜಾರಿಯೋ ಅಥವಾ ಕಾಲಲ್ಲಿ ಪತ್ತಲು ಸಿಕ್ಕೋ ಏನೋ, ಹೇಗೋ ಬಿದ್ದಳು. ಕುಶಾಗ್ರ ಬುದ್ಧಿಯ ಆ ಮೋಟಾರ ಡ್ರೈವರನು ಬ್ರೇಕು ಹಾಕಿ ಮೋಟಾರಕಾರನ್ನು ತರುಬಿದನು. ಹಿಂದಿನಿಂದ ಒಂದು ವಿಕ್ಟೋರಿಯವೂ ಬಂದಿತು. ಅದೂ ಅಲ್ಲಿಯೆ ನಿಂತಿತು. ಆಕೆಯ ಸುತ್ತುಮುತ್ತು ಹಲವರು ನೆರೆದರು. ಒಬ್ಬರೂ ಬಂದು ಆಕೆಯನ್ನು ಎಬ್ಬಿಸಲಿಲ್ಲ.

ಲೀಲೆಯ ಗೆಳತಿಯು ಲೀಲೆಯು ಬಿದ್ದದ್ದನ್ನು ನೋಡಿ ಹುಚ್ಚಿಯಂತೆ ಗಾಬರಿಯಾಗಿ ನೋಡುತ್ತ ನಿಂತಿದ್ದಳು. ಆಕೆಯು ಅಂಜಿದಳು. ಇಷ್ಟರಲ್ಲಿಯೇ ವಿಕ್ಟೋರಿಯದಿಂದ ಬಿಳೀ ಬಣ್ಣದ ಖಾದಿಯ ಉಡುಪಿನ ತರುಣನು ಬಂದನು. ಆಕೆಯನ್ನು ಎಬ್ಬಿಸಿದನು. ಆಕೆಯ ಕಣ್ಣುಗಳು ಅಶ್ರುಪೂರಿತವಾಗಿದ್ದವು. ಪತ್ತಲವೆಲ್ಲ ಹೊಲಸಾಗಿತ್ತು. ಮೈಯು ಅಂಜಿಕೆಯಿಂದ ನಡುಗುತ್ತಿತ್ತು ಅದನ್ನು ಕಂಡು ಆ ತರುಣನು— "ನಾನಿದ್ದೇನೆ; ಗಾಬರಿಯಾಗಬೇಡಿರಿ" ಎಂದು ಹೇಳಿ ಆಕೆಯ ಗೆಳತಿಯ ಸಹಾಯದಿಂದ ಲೀಲೆಯನ್ನು ವಿಕ್ಟೋರಿಯದಲ್ಲಿ ಕೂಡ್ರಿಸಿದನು. ಗೆಳತಿಯಿಂದ ಆಕೆಯ ಮನೆಯನ್ನು ಕೇಳಿ ವಿಕ್ಟೋರಿಯವನ್ನು ಅತ್ತಕಡೆಗೇ ಒಯ್ಯುವಂತೆ ಹೇಳಿದನು. ಲೀಲೆಯು ವಾಸಿಸುವ ಗೃಹವು ಬಂದಿತು. ಲೀಲೆಯ ಆ ಗೆಳತಿಯಾದ ಆ ಶಾಂತೆಯು ಓಡುತ್ತ ಹೋಗಿ ಲೀಲೆಯ ತಾಯಿ ತಂದೆಗಳನ್ನು ಕರಕೊಂಡು ಬಂದಳು. ತಮ್ಮ ಮಗಳು ಸುರಕ್ಷಿತವಾಗಿದ್ದದ್ದನ್ನು ನೋಡಿ ಮತ್ತೆ ಜೀವದಲ್ಲಿ ಜೀವ ಬಂದಿತು.

ಬಳಿಕ ಆಕೆಯನ್ನು ಹಿಡಿದೆತ್ತಿ ಕೋಣೆಯಲ್ಲಿ ಒಯ್ದರು. ಆಕೆಯ ಎಡಗಾಲಿಗೆ ಬಲವಾಗಿ ಪೆಟ್ಟು ತಗಲಿತ್ತು. ಅಷ್ಟರಲ್ಲಿಯೇ ಆ ತರುಣನು ಕರೆಕಳುಹಿದ ಡಾಕ್ಟರರು ಬಂದರು. ಅವರು "ಲೀಲೆಯ ಎಲುವುಗಿಲುವುಗಳೇನೂ ಮುರಿದಿಲ್ಲ. ಪೆಟ್ಟು ಮಾತ್ರ ಬಲವಾಗಿ ತಾಗಿದೆ" ಎಂದು ಹೇಳಿ ಒಂದು ತರದ ಔಷಧವನ್ನು ಕೊಟ್ಟು ನಡೆದರು. ಯಾವತ್ತೂ ತರದ ವ್ಯವಸ್ಥೆಯು ಚೆನ್ನಾಗಿಯಾಗಲು ತರುಣನು ಹೊರಟನು. ಆಗ ಲೀಲೆಯ ತಂದೆಯವರು ತರುಣನ ಆಭಾರವನ್ನು ಮನ್ನಿಸಿದರು. ಲೀಲೆಯ ತಾಯಿಯವರು "ನಿಮ್ಮ ಸಹಾಯದಿಂದ ನಮ್ಮ ಮಗಳ ಮೋರೆಯನ್ನು ನಾವು ಇಂದು ನೋಡಿದೆವು" ಎಂದು ನುಡಿದಳು. ಆಗ ಆ ತರುಣನಿಗೆ ಏನು ಮಾತಾಡಬೇಕೆಂಬುದೇ ತಿಳಿಯದಾಯಿತು. ಆದರೂ "ಸ್ವಲ್ಪ[illegible] ಹೋಯಿತು; ಒಳ್ಳೇದಾಗುವುದಿನ್ನು" [illegible] ನುಡಿದನು.

ಲೀಲೆಯ ತಂದೆಯವರು "ನಿಮ್ಮಂತೆ ಉಪಕಾರ ಮಾಡುವವರು ಬಹಳೇ ವಿರಳರು" ಎನಲು ತರುಣನು "ಛೇ ಛೇ, ಇದೆಂತ[illegible] ಉಪಕಾರ;

ನನ್ನ ತಂಗಿ ಅಥವಾ ಮತ್ತೆ ಯಾರಾದರೂ ನನ್ನವರು ಬಿದ್ದಿದ್ದರೆ ನಾನು ಎಚ್ಚಿಸುತ್ತಿದ್ದಿಲ್ಲವೇ? ಇದು ನಮ್ಮ ವ್ರತವೇ ಅದೆ."

"ಇಂಥ ಕಾರ್ಯಕರ್ತರು ಎಷ್ಟು ಜನರಿದ್ದಾರೆ? ಇದೆಲ್ಲ ಅವರವರ ಸ್ವಭಾವವನ್ನವಲಂಬಿಸಿದೆ" ಎಂದು ಲೀಲೆಯ ತಂದೆಯವರು ನುಡಿದರು.

ಬಳಿಕ ಆ ತರುಣನಿಗೆ ಮತ್ತೆ ಏನೇನೋ ಮಾತಾಡುವುದಿತ್ತು. ಆದರೂ ಮಾತಾಡದೆ ನಮಸ್ಕಾರಮಾಡಿ ನಡೆದನು. ಪಲ್ಲಂಗದ ಮೇಲೆ ಮಲಗಿದ್ದ ಲೀಲೆಯು ತರುಣನ ಕಡೆಗೆ ನೀರು ತುಂಬಿದ ಕಣ್ಣುಗಳಿಂದ ಒಂದು ಕ್ಷಣಹೊತ್ತು ನೋಡಿದಳು.

ಬಳಿಕ ಮರುದಿವಸ ಲೀಲೆಯ ಪ್ರಕೃತಿಯನ್ನು ನೋಡುವುದಕ್ಕೆ ಆ ತರುಣನು ಮತ್ತೆ ಬಂದನು. ತಾನು ತಂದ ಔಷಧಿಯನ್ನು ಕೊಟ್ಟು ಪೆಟ್ಟು ಬಡಿದ ಸ್ಥಳಕ್ಕೆ ತಿಕ್ಕಹೇಳಿದನು. ಡಾಕ್ಟರರ ಔಷಧಕ್ಕಿಂತಲೂ ತರುಣನ ಔಷಧದಿಂದಲೇ ಗುಣವಾಗಹತ್ತಿತು. ಲೀಲೆಯು ಎದ್ದು ತಿರುಗಾಡಹತ್ತಲು ತರುಣನಿಗೆ ಆನಂದವೆನಿಸಿತು. ತರುಣನ ವೃತ್ತಾಂತವೆಲ್ಲ ಈಗ ಲೀಲೆಯ ತಂದೆಯವರಿಗೆ ತಿಳಿದಿತ್ತು. ಅದೆಂತೆಂದರೆ—ಅವನ ಹೆಸರು ಮನೋಹರ. ಅವನು ಫಾಯ್ನಲ್ ವರೆಗೆ ಕಲಿತವನು. ಬಡತನದ ಮೂಲಕ ಮುಂದೆ ಕಲಿಯುವುದಾಗಲಿಲ್ಲ. ಬಳಿಕ ಒಂದು ಸರಕಾರಿ ನೌಕರಿಯಲ್ಲಿ ಇಪ್ಪತ್ತೈದು ರೂಪಾಯಿಗಳು ದೊರೆಯುತ್ತಿದ್ದವು. ಆದರೆ ಮುಂದೆ ಮಹಾತ್ಮಾಜಿಯವರ ಚಳವಳಿಯಲ್ಲಿ ಸೇರಿದನು. ನೌಕರಿಯನ್ನು ಬಿಟ್ಟರೆ ಗತಿಯಿಲ್ಲದಂತಿದ್ದರೂ ಮತ್ತು ಜನರು ಎಷ್ಟು ಹೇಳಿದರೂ ಕೇಳಲೇ ಇಲ್ಲ. ಉತ್ಸಾಹದಿಂದಲೂ ಹುರುಪಿನಿಂದಲೂ ಪ್ರತಿಯೊಂದು ಕೆಲಸವನ್ನು ಮಾಡುವನು. ದೊಡ್ಡ ದೊಡ್ಡ ಕೆಲಸಗಳಲ್ಲಿ ಭಾಗತೆಗೆದುಕೊಳ್ಳುತ್ತಿದ್ದನು. ಸಂಕಟ ಸಮಯದಲ್ಲಿ ಹೇಗೆ ದಾರಿ ತೆಗೆಯಬೇಕೆಂಬದು ಅವನಿಗೆ ಗೊತ್ತಾಗಿತ್ತು. ಮತ್ತು ಅದರಂತೆ ಎರಡನೆಯವರಿಗಾದರೂ ಹೇಳುತ್ತಿದ್ದನು. ತನ್ನ ಕರ್ತವ್ಯವನ್ನು ಜಾಗರೂಕತನದಿಂದಲೂ ಅನಾಸಕ್ತಿಯಿಂದಲೂ ಮಾಡುತ್ತಿದ್ದನು. ಅದರಿಂದ ಎಲ್ಲರಿಗೂ ಆತನು ಬೇಕಾದವನಾಗಿದ್ದನು.

ಲೀಲೆಯ ತಂದೆಯವರು ಖಾದಿಯನ್ನು ಉಪಯೋಗಿಸುತ್ತಿರಲಿಲ್ಲ. ಆದರೆ ಮನೋಹರನ ಉಪದೇಶದಿಂದ ಉಪಯೋಗಿಸಹತ್ತಿದರು. ಅವನ ಒಂದೊಂದೇ ವಿಚಾರಗಳು ಆಗ ಲೀಲೆಯ ತಂದೆಯವರಿಗೆ ಹೊಂದಹತ್ತಿದುವು. ಅವರ ಮೊದಲಿನ ಖಾದಿಯ ವಿಷಯಕ್ಕೂ ಇದ್ದ ಹೇಯ ಭಾವವು ದೂರವಾಯಿತು.

ಲೀಲೆಗೆ ಈಗ ಪೂರ್ಣ ಗುಣವಾಗಿತ್ತು. ಇನ್ನೂ ಶಾಲೆಗೆ ಹೋಗುತ್ತಿರಲಿಲ್ಲ. ಒಂದು ದಿನ ಮಧ್ಯಾಹ್ನದಲ್ಲಿ ಆಕೆಗೆ ಹೊತ್ತು ಹೋಗದಾಯಿತು. ವರ್ತಮಾನ ಪತ್ರವನ್ನು ತಿರುವುತ್ತ ಕುಳಿತ್ತಿದ್ದಳು. ದೊಡ್ಡ ಅಕ್ಷರದಲ್ಲಿ ಮುದ್ರಿಸಿದ ಒಂದು ಸಂಗತಿಯನ್ನು ನೋಡಿ ಆಕೆಯ ಎದೆಯು ಧಸ್ಸೆಂದಿತು ಕಣ್ಣೊಳಗಿಂದ ನೀರು ತುಂಬಿದವು. ಮನಸ್ಸಿನಲ್ಲಿ ಹೇಗೋ ಎನಿಸಿತು. ಹಾಗೆಯೇ ಅವಸರದಿಂದ ಓಡುತ್ತ ತಾಯಿಯ ಬಳಿಗೆ ಬಂದು—"ಅವ್ವಾ, ಅವ್ವಾ! ಇಲ್ಲಿ ನೋಡು, ಈ ಸುದ್ದಿಯನ್ನು! ನೋಡಿದಿಯೇನು? ಆ ಮನೋಹರನನ್ನು ಬಂಧಿಸಿ ಸೆರೆಮನೆಯಲ್ಲಿಟ್ಟಿದ್ದಾರಂತೆ!" ಆಗ ಲೀಲೆಯ ತಾಯಿಯ ಕುತ್ತಿಗೆಯು ಬಿಗಿದು ಬಂದಿತು.

ಸಂಜೆಗೆ ತಂದೆಯು ಮನೆಗೆ ಬರಲು ಲೀಲೆಯು ಅವರಿಗೆ ಹೇಳಿದಳು. ಆಗ ಲೀಲೆಯ ತಂದೆಯವರಿಗೂ ಬಹಳ ಕೆಟ್ಟೆನಿಸಿತು. ತಮ್ಮ ಮೇಲೆ ಉಪಕಾರ ಮಾಡಿದವನಿಗೆ ಏನಾದರೂ ಉಪಕಾರ ಮಾಡಬೇಕೆಂದೆನಿಸಿತು. ಬೆಳಗಾಗುತ್ತಲೆ ಎದ್ದು ಪ್ರಾತರ್ವಿಧಿಗಳನ್ನು ತೀರಿಸಿಕೊಂಡು ಕಚೇರಿಗೆ ಹೋಗಿ ಹಣವನ್ನು ತುಂಬಿ ಮನೋಹರನನ್ನು ಬಿಡಿಸಿದರು. ಮನೋಹರನಿಗೆ ಆಶ್ಚರ್ಯವೆನಿಸಿತು. ಹೊರಗೆ ಬಂದು ನೋಡುತ್ತಾನೆ! ಲೀಲೆಯ ತಂದೆಯವರು! ಆಗ ಮನೋಹರನು—"ಏನು ಗುರುರಾಯರೇ, ಇದೇನು ಮಾಡಿದಿರಿ?" ರಾಯರು—"ತಮ್ಮಂಥವರು ಜೈಲಿನಲ್ಲಿದ್ದು ಕಷ್ಟಗಳನ್ನು ತಾಳುತ್ತ ದೇಹವನ್ನು ದಂಡಿಸುವುದು ಸರಿಯೇ?"

"ನನ್ನಂತೆಯೇ ಇನ್ನೆಷ್ಟೋ ಜನರು ಕಷ್ಟಗಳನ್ನು ಹೊಂದುವುದಿಲ್ಲವೇ? ಬಡವರು ಇಷ್ಟು ಹಣವನ್ನು ಎಲ್ಲಿಂದ ತರಬೇಕು? ಅವರು ಈ ತರದ ಕಷ್ಟಗಳನ್ನು ಅನುಭವಿಸುವುದಿಲ್ಲವೇ? ಈಗ ನೀವು ನನ್ನನ್ನು ಬಿಡಿಸಿದಿರಿ. ಇನ್ನೊಮ್ಮೆ ನಾನು ಈ ಕೆಲಸವನ್ನು ಮಾಡುವುದಿಲ್ಲವೆಂದು ಹೇಗೆನ್ನುತ್ತೀರಿ? ಹೀಗೆ ವ್ಯರ್ಥ ಹಣ ವೆಚ್ಚಮಾಡುವುದಕ್ಕಿಂತ ಯಾವುದಾದರೊಂದು ಸ್ವದೇಶ ಕಾರ್ಯಕ್ಕೆ ಕೊಟ್ಟರೆ ಚಲೋದಾಗಿತ್ತು" ಎಂದು ಮನೋಹರನು ಶಾಂತತೆಯಿಂದ ನುಡಿದನು.

"ಹೌದು, ನಿಮ್ಮ ಮಾತು ನಿಜ. ಯಾವನು ನಮ್ಮ ಮೇಲೆ ಉಪಕಾರ ಮಾಡುವನೋ ಅವನ ಮೇಲೆ ಉಪಕಾರ ಮಾಡುವುದೂ ನಮ್ಮ ಕರ್ತವ್ಯವು" ಎಂದು ರಾಯರು ನುಡಿದರು.

ಬಳಿಕ ಮನೋಹರನು ರಾಯರ ಕೃತಜ್ಞತೆಯನ್ನು ಮನ್ನಿಸಿ ತನ್ನ ಮನೆಗೆ ಹೋದನು. ರಾಯರೂ ಮನೆಗೆ ಹೋದರು. ತಂದೆಯು ಮನೆಗೆ ಬರಲು ಮನೋಹರನ ಬಿಡುಗಡೆಯ ಸುದ್ದಿ ಕೇಳಿ ಲೀಲೆಗೂ ಯಾವತ್ತೂ ಮನೆಯವರಿಗೂ ಆನಂದವಾಯಿತು. ಅ.



೧೯೩೨ನೇ ಮೇ ತಿಂಗಳಲ್ಲಾದ ಬೊಂಬಾಯಿಯ ಹಿಂದೂ-ಮುಸ್ಲಿಂ ಗಲಭೆಯ ಸಂಬಂಧವಾಗಿ ಕಳೆದ ವಾರ ಒಬ್ಬ ಮುಸ್ಲಿಮನನ್ನು ಸೆರೆಹಿಡಿದಿರುವರು. ಹಿಂದೂಗಳ ಮನೆಗಳನ್ನು ಲುಟಾಯಿಸುವುದರಲ್ಲಿ ಆತನು ಪ್ರಾಮುಖ್ಯ ಭಾಗವಹಿಸಿದ್ದನಂತೆ.

ರಬ್ಬರ್ ಬೆಳೆಯನ್ನು ಮಿತಪಡಿಸಿ, ರಫ್ತನ್ನು ಕ್ರಮ ಪಡಿಸಲು ಜಾವದಲ್ಲಿಯೂ 'ರಬ್ಬರ್ ರಿಸ್ಟ್ರಿಕ್ಷನ್ ಆರ್ಡಿನೆನ್ಸ' ನ್ನು ಜ್ಯಾರಿಗೆ ತಂದಿರುವರು.

ಇಟಾವಾ ಜಿಲ್ಲೆಯ ಖಾಂಡೇಶಿ ಹಳ್ಳಿಯು ಬೆಂಕಿಯಿಂದ ಸಂಪೂರ್ಣ ಭಸ್ಮ!

ಡಾರ್ಜಿಲಿಂಗ್ ಅತ್ಯಾಚಾರದ ಸಂಬಂಧವಾಗಿ ಪ್ರತುಲ ಚೌಧುರಿ ಎಂಬ ಬಿ. ಎಸ್. ಸಿ. ವಿದ್ಯಾರ್ಥಿಯೊಬ್ಬನನ್ನು ಕಲ್ಕತ್ತದಲ್ಲಿ ದಸ್ತಗಿರಿ ಮಾಡಿರುವರು.

ಬಕ್ಸಾರ್ ರೈಲ್ವೇ ಸ್ಟೇಷನ್ ಬಳಿ, ರೈಲುಬಂಡಿಯನ್ನು ಕೆಳಗುರುಳಿಸುವ ದುರುದ್ದೇಶದಿಂದ ಯಾರೋ ದುರಾತ್ಮರು ಕಂಬಿಗಳನ್ನು ಕಿತ್ತು ಹಾಕಿದುದು ತೋರಿಬಂದಿದೆ.

ಹಿಂದೀಯರಿಗೆ ವಿಮಾನ ಸಂಚಲನದ ತರಬೇತಿ ಕೊಡುವ ಬಗ್ಗೆ ರಂಗೂನಿನಲ್ಲಿ ಒಂದು ಶಾಲೆಯು ಸ್ಥಾಪಿತ ವಾಗಿದ್ದು, ಆರಂಭದಲ್ಲಿ ೨೩ ಮಂದಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲಾಗಿದೆ.

ರಂಗೂನ್ ಮೈಲ್ ಬಂಡಿಯು ರಭಸದಿಂದ ಓಡುತ್ತಿದ್ದಾಗ, ಒಬ್ಬ ಕೈದಿಯು ನಡುದಾರಿಯಲ್ಲಿ, ನಡುರಾತ್ರಿಯಲ್ಲಿ ಬಂಡಿಯಿಂದ ಹಾರಿ ತಲೆಮರೆಸಿಕೊಂಡಿರುವನು.

ಸಿಲೋನಿನ ಉತ್ತಮಾರ್ಮಯಾ ಎಂಬಲ್ಲಿನ ಬೌದ್ಧ ಮಹಾಸ್ವಾಮಿಗಳು ತಮ್ಮ ೧೦೭ನೇ ವಯಸ್ಸಿನಲ್ಲಿ ಕಾಲವಾದರು.

ಮಾಜಿ ಕೊಂಗ್ರೆಸ್ ಕಾರ್ಯದರ್ಶಿಗಳಾದ ಅಬೀದ್ ಆಲಿ ಜಫರ್‌ಭಾಯಿಯವರಿಗೆ ಯುರೋಪ್ ಪ್ರವಾಸಕ್ಕೆ ಬೊಂಬಾಯಿಯಿಂದ ಪಾಸ್‌ಪೋರ್ಟ್ ದೊರೆಯಲಿಲ್ಲ.

ಮೆಟ್ರಿಕ್ಯುಲೇಶನ್ ಪರೀಕ್ಷೆಯ ಫಲಿತಾಂಶಗಳ ಪ್ರಕಟನೆಯನ್ನು ನೋಡುತ್ತಲೇ ತಾನು ತೇರ್ಗಡೆ ಹೊಂದದಿರುವುದನ್ನು ಕಂಡು, ಬೊಂಬಾಯಿಯ ಇರಾಣಿ ವಿದ್ಯಾರ್ಥಿಯೊಬ್ಬನು ಚರ್ನಿ ರೋಡಿನಲ್ಲಿರುವ ಜಹಾಂಗೀರ್ ವಾಡಿಯಾ ಕಟ್ಟಡದ ಮೇಲೆ ಹತ್ತಿ ಕೆಳಗೆ ಹಾರಿ ಆತ್ಮಹತ್ಯೆ ಮಾಡಿಕೊಂಡನು.

ಗಡಿಪ್ರಾಂತ್ಯದಲ್ಲಿ ಸಿಡುಬು ಹಬ್ಬಿದ್ದು, ೧೪ ದಿನಗಳಲ್ಲಿ ೫೯ ಜನರಿಗೆ ತಗಲಿ, ೩೭ ಆಹುತಿಯಾದರು.

ಶ್ರೀಮತಿ ಕಸ್ತೂರಿಭಾಯಿ ಗಾಂಧಿಯವರು ಢಿಲ್ಲಿಗೆ ಬಂದು, ತಮ್ಮ ಪುತ್ರ ದೇವಿದಾಸ ಗಾಂಧಿಯವರೊಡನೆ ಉಳಕೊಂಡಿದ್ದಾರೆ.

ನಗೆಯ ಲೂಟಿ!!!

ಡಾಕ್ಟರ್—ಕಣ್ಣಿಲ್ಲಾರಾವು, K. U. R. U. D. A.

ಮಗಳು:-ಅಮ್ಮಾ ನಾನು ನಿನ್ನ ತಂದೆಯನ್ನು ಮದುವೆ ಯಾಗುವೆನು.

ತಾಯಿ:-ಹಾಗನ್ನಬಾರದು ಮಗೂ!

ಮಗಳುಃ-ಹಾಗಾದರೆ, ನೀನೇಕೆ ನನ್ನ ತಂದೆಯನ್ನು ಮದುವೆ ಯಾದುದು?

* * * + * *

ತಂದೆ:-ಶಾಲಾ ಪರೀಕ್ಷೆಯಲ್ಲಿ ಉಪಾಧ್ಯಾಯರು ಒಟ್ಟೆಷ್ಟು ಪ್ರಶ್ನೆಗಳನ್ನು ಕೊಟ್ಟಿದ್ದಾರೆ?

ಮಗ:—ಇಪ್ಪತ್ತು ಪ್ರಶ್ನೆಗಳನ್ನು,

ತಂದೆ:-ಅವುಗಳಲ್ಲಿ ನೀನೆಷ್ಟು ತಪ್ಪು?

ಮಗ:-ಒಂದೇ ಒಂದು ತಪ್ಪು!

ತಂದೆ:—ಅಷ್ಟೇನೇ? ಚಿಂತಿಲ್ಲ. ಬಾಕಿಯವುಗಳು ಸರಿಯಷ್ಟೆ?

ಮಗ:—ಇಲ್ಲ ಅಪ್ಪ-ಬಾಕಿಯವುಗಳನ್ನು ಮಾಡಿದ್ದೇ ಇಲ್ಲ.

(ಹಾಸ್ಯಗಾರ.)

* * * * * *

ಸಣ್ಣಮಗು:-ಅಮ್ಮಾ ನಾನು ಹುಟ್ಟುವಾಗ ನೀನು ನಮ್ಮ ಮನೆಯಲ್ಲೇ ಇದ್ದೆಯಮ್ಮ?

ತಾಯಿ:-ಇಲ್ಲ ಮಗು, ನಿನ್ನ ಅಜ್ಜಿ ಮನೆಯಲ್ಲಿದ್ದೆ.

ಮಗು:-ಹಾಗಾದರೆ ನಾನು ಹುಟ್ಟಿದ ಸಂಗತಿ ಕೇಳಿ ನಿನಗೆ ಬಹಳ ಆಶ್ಚರ್ಯವಾಗಿರಬೇಕು.

(ವಿ. ಆರ್. ಭಟ್.)

* * * * * *

ಜವುಳಿ ಮಾರುವವ:—ಅಮ್ಮಾ! ಜವುಳಿ ಬೇಕೇ?

ಸಿಡುಕಿನ ಸುಬ್ಬಮ್ಮ:—ನನಗೆ ಬೇಡ, ಹೋಗತ್ತ!

ಜ. ಮಾ.—ಸರಿ! ಆ ಮನೆಯ ವೆಂಕಮ್ಮ ಹೇಳಿದಂತೆಯೇ ಆಯಿತು.

ಸಿ. ಸು.—ಆಂ. ಏನಂದಳು ಆ ರಂಡೆ?

ಜ. ಮಾ.—ನಿಮಗೆ ಶೀರೆ ತೆಗೆದುಕೊಳ್ಳುವರೆ ಗತಿಯೇ ಇಲ್ಲವೆಂದು.

ಸಿ. ಸು.—ಹೌದೋ? ತಾ ಇಲ್ಲಿ, ಎರಡು ಶೀರೆ ಕೊಡು.

* * * * * *

ಪಾರ್ವತಮ್ಮನವರು ಕಿಟ್ಟು ಮತ್ತು ಲೀಲಾ ಇಬ್ಬರಿಗೂ ಬೆಳಿಗ್ಗೆ ಒಂದೊಂದು ಬಾಳೆ ಹಣ್ಣನ್ನು ಕೊಟ್ಟು "ನನ್ನ ಹಣ್ಣನ್ನು ನಾನು ಸಂಜೆಯ ವರೆಗೂ ತಿನ್ನುವುದಿಲ್ಲ" ಎಂತ ಇಬ್ಬರಿಂದಲೂ ಮಾತು ತೆಗೆದುಕೊಂಡರು.

ಮಧ್ಯಾಹ್ನದ ಹೊತ್ತಿಗೇ ಹಣ್ಣುಗಳಿರಲಿಲ್ಲ. "ಸುಳ್ಳು ಹುಡುಗರಿರಾ, ಮಾತಿಗೆ ತಪ್ಪಿದಿರಲ್ಲೋ" ಎಂದು ತಾಯಿ ಗದರಿಸಿದುದಕ್ಕೆ ಲೀಲಾ ಉತ್ತರ ಕೊಟ್ಟಳು:"ಇಲ್ಲ ಅಮ್ಮ ನಾವು ಮಾತಿಗೆ ತಪ್ಪಿಲ್ಲ. ನಮ್ಮ ನಮ್ಮ ಹಣ್ಣು ನಾವು ಖಂಡಿತ ತಿಂದಿಲ್ಲ. ಕಿಟ್ಟೂ ಹಣ್ಣು ನಾನು ತಿಂದೆ. ನನ್ನ ಹಣ್ಣು ಅವನು ತಿಂದ."

(ಕತೆಗಾರ.)

* * * * * *

ಜೈಲ್ ಇನ್ಸ್‌ಪೆಕ್ಟರ್:—(ಒಬ್ಬ ಕೈದಿಯನ್ನು ಕುರಿತು) ನಿನಗೆ ಯಾತಕ್ಕೋಸ್ಕರ ಶಿಕ್ಷೆಯಾದುದು?

ಕೈದಿ:-ಒಂದು ಸಣ್ಣ ಹಗ್ಗವನ್ನು ಕದ್ದುದಕ್ಕಾಗಿ ಸ್ವಾಮೀ!

ಜೈ. ಇ.—ಸುಳ್ಳು, ಒಂದು ಸಣ್ಣ ಹಗ್ಗವನ್ನು ಕದ್ದುದಕ್ಕಾಗಿ ಶಿಕ್ಷೆಯಾಗಲಾರದು!

ಕೈದಿ:-ಆದರೆ ಆ ಹಗ್ಗದ ತುದೀಗೊಂದು ಎಮ್ಮೆ ಮಾತ್ರ ಕಟ್ಟಿತ್ತು.

* * * * * *

ತಂದೆ:-ಮೊನ್ನೆ ನಿನಗೆ ಸ್ಕೂಲಿನಲ್ಲಿ ಎರಡು ಬಹುಮಾನಗಳು ಬಂದುವೆಂದು ಹೇಳಿದೆಯಲ್ಲ. ಯಾತಕ್ಕೋಸ್ಕರ?


ಮಗ:-ಒಂದು ನನಗಿರುವ ಜ್ಞಾಪಕ ಶಕ್ತಿಗೋಸ್ಕರ. ಮತ್ತೊಂದು ಯಾವುದಕ್ಕೋ ನೆನಪಿಲ್ಲ.

(ವಿ. ವಿ.)

ಸಯನ್ಸ್ ಮಾಸ್ಟರ್—"ನಾನು ನೆಟ್ಟಗೆ ನಿಂತರೆ ಏನಾಗುವುದಿಲ್ಲ. ಕಾಲು ಮೇಲೆ ಮಾಡಿ ಚೇಳು ಬಾಗಿದರೆ ರಕ್ತ ಕೆಳ ಹರಿದು ಮುಖ ಕೆಂಪಾಗುತ್ತದೆ. ಇದು ಏತರಿಂದ?

ಹುಡುಗ: —ಅದು ನಿಮ್ಮ ಸಂಬಂಧಿಕರಿಗಾರಿಗೋ ರಕ್ತಪಿತ್ತದ ರೋಗದಿಂದಿರಬಹುದು.

(ಹಾಸ್ಯಗಾರ)



ಈ ಸಂಚಿಕೆಯೊಡನೆ 'ಬಡವರ ಬಂಧು'ವಿಗೆ ಎರಡು ವರ್ಷಗಳು ತುಂಬಿದುವು. ಬರುವ ಸಂಚಿಕೆಗೆ (ಜುಲೈ) ಸಂಚಿಕೆಯನ್ನು ನಿಲ್ಲಿಸಲಾಗಿದೆ. ಅಗೋಸ್ತ್ ತಿಂಗಳಿನಿಂದ) ಮೂರನೇ ವರ್ಷಾರಂಭವಾಗುವುದು. ಸಾಲ ಸೋಲಗಳಿಲ್ಲದೆ ಈ ವರ್ಷವೂ "ಬಡವರ ಬಂಧು"ವನ್ನು ಯಶಸ್ವಿಯಾಗಿ ನಡೆಸಲನುಕೂಲಿಸಿಕೊಟ್ಟ, ವಾಚಕ ಮಹಾಶಯರಿಗೂ, ಜಾಹೀರಾತುದಾರರಿಗೂ ಮುದ್ರಣಗಾರರಿಗೂ ಈ ಸಂದರ್ಭದಲ್ಲಿ ವಂದನೆಗಳನ್ನರ್ಪಿಸಬಯಸುತ್ತೇವೆ.

ಊರೊಳಗಿನ ಬಟ್ವಾಡೆ ಕೆಲಸದಲ್ಲಿ ಒದಗುವ ವಾಚಕರ ಅನಾನುಕೂಲತೆಗಳನ್ನು ತಪ್ಪಿಸುವುದಕ್ಕಾಗಿ ಅವರ ಪತ್ರಿಕೆಗಳನ್ನು ಅಂಚೆಮೂಲಕ ರವಾನಿಸುವ ಯೋಜನೆ ಹೂಡಲಿರುವೆವಾದುದರಿಂದ ಮೂರನೇ ವರ್ಷದಿಂದ ಊರವರ ಚಂದಾಹಣವನ್ನು ರೂ.೧-೪-೦ನ್ನಾಗಿ ಇಡಬೇಕೆಂದು ಆಲೋಚಿರುವೆವು. ಈ ಬಗ್ಗೆ ಊರವಾಚಕರು ತಮ್ಮ ಅಭಿಪ್ರಾಯಗಳನ್ನೀಯಬೇಕಾಗಿ ಕೋರಿಕೆ.

ನಮ್ಮ ಎಲ್ಲಾ ಏಜಂಟರು ಮೂರನೇ ವರ್ಷಕ್ಕೆ ತಮ್ಮ ಭದ್ರತೆಯ ಹಣವನ್ನು ಬರುವ ತಿಂಗಳೊಳಗೆ ರವಾನಿಸಿಕೊಡಬೇಕಾಗಿ ಕೋರಿಕೆ.

ಬರುವ ಮೂರನೆ ವರ್ಷದಿಂದ "Badavara Bandhu Employment Page" "ಬಡವರ ಬಂಧು ಉದ್ಯೋಗ ಪುಟ"ವೊಂದನ್ನು ತೆರೆಯಲಿದ್ದೇವೆ. ಇದರಲ್ಲಿ ಉದ್ಯೋಗ ಸಂಬಂಧವಾದ ಸೂಚನೆಗಳು ಪ್ರಕಟವಾಗುವುವು. ಅಲ್ಲದೆ ಸಾಬೂನು ತಯಾರಿಸುವ ವಿಧಾನ, ಬೆಂಕಿ ಪೆಟ್ಟಿಗೆ ತಯಾರಿಸುವ ವಿಧಾನ, ಸೋಡಾ ತಯಾರಿಸುವ ವಿಧಾನಗಳನ್ನೂ ಕ್ರಮಪ್ರಕಾರವಾಗಿ ಪ್ರಕಟಿಸಬೇಕೆಂದಿರುವೆವಲ್ಲದೆ, **'ನಮ್ಮ ಮುದ್ದುಗಳು'** ಎಂಬ ಪುಟವೂ, 'The South Kanara Trade Directory ಎಂಬ ಪುಟವೂ ಬರುವುವು.

ಎಲ್ಲರ ಸಹಕಾರವು ಇರಲೆಂದು ಪುನಃ ಪುನಃ ಬೇಡುವೆವು.

ನಮ್ಮ ವಿಶೇಷ ಸಂಚಿಕೆ.

ಇದು ಅಗೋಸ್ತು ತಿಂಗಳ ನಂತರ ಹೊರಡಲಿರುವುದು. 1/8 ಸೈಜಿನಲ್ಲಿ ೧೫೦ ಪುಟಗಳನ್ನಾದರೂ ಕೊಡಬೇಕೆಂದಿರುವೆವು. ಪಂಡಿತ ತಾರಾನಾಥರು ತುಂಗಭದ್ರೆ; ಶ್ರಿ ಡಿ. ಕೆ. ಭಾರಧ್ವಾಜ ಆಯುರ್ವೇದಭಾನು, ಬೆಂಗಳೂರು ಮೊದಲಾದವರು ತಮ್ಮ ತಮ್ಮ ಅಮೂಲ್ಯ ಕಥೆಗಳನ್ನು ಇಷ್ಟರಲ್ಲೇ ಕಳುಹಿಸಿ ನಮ್ಮನ್ನು ಪ್ರೋತ್ಸಾಹಿಸಿರುವರು. ಅಖಿಳ ಕರ್ನಾಟಕದ ಕಥೆಗಾರರನ್ನು ಇದರಲ್ಲಿ ಒಂದುಗೂಡಿಸಬೇಕೆಂಬ ಮಹದಾಶೆಯಿರುತ್ತದೆ. ಎಲ್ಲವೂ ಜನಪದ ಸಂಬಂಧವನ್ನುಳ್ಳ ಕಥೆಗಳು. ಈ ಪುಸ್ತಕದಲ್ಲಿ ಜಾಹೀರಾತುಗಳಿರುವುದಿಲ್ಲ. ಹಲವರು ಈ ಸಂಚಿಕೆಗೆ ತಮ್ಮ ಜಾಹೀರಾತುಗಳನ್ನು ಕಳುಹಿಸಿರುವರಾದರೂ ಅವುಗಳನ್ನು ಹಿಂದಕ್ಕೆ ಕಳಿಸಬೇಕಾಗಿದೆಯೆಂದು ವಿಷಾದಿಸುವೆವು.

ನೋಟೀಸು- ಬರುವ ತಿಂಗಳಲ್ಲಿ 'ಬಡವರ ಬಂಧು'ವು ಪ್ರಕಟವಾಗುವುದಿಲ್ಲ. ಅಗೋಸ್ತಿನಲ್ಲಿ ಪ್ರಕಟವಾಗುವುದನ್ನು ಗಮನಿಸಿರಿ!

ಮೈಸೂರು ನರ್ಸಣ್ಣನ ಕೊನೆಯ ನಮಸ್ಕಾರ.

ಜೈ ಮಿಸ್ಟರ್—ಮೈಸೂರು ನರ್ಸಣ್ಣ.

ಎರಡು ವರ್ಷಗಳು ದಾಟಿದುವು ಸ್ವಾಮಿ,-ನನಗೂ ನನ್ನ 'ಬಡವರ ಬಂಧು'ವಿಗೂ. ಹೇಗೂ ಬಾಳಿದೆ, ಇಷ್ಟರ ತನಕ. ಕೆನ್ನೆಗೆ ಕೊಡುತ್ತೇನೆಂದಿದ್ದವರೂ ಕೊಡಲಿಲ್ಲ. ನನಗೂ ಕೊಡಲಿಕ್ಕೆ ಸಾಧ್ಯವಾಗಲೂ ಇಲ್ಲ! ಎಲ್ಲ ದುರದೃಷ್ಟವೆನ್ನಿ. ನನ್ನ ಹೆಂಡತಿ ಮಕ್ಕಳ ಗೊಡವೆ ಬಿಟ್ಟು ಈ ಊರಿಗೆ ಬಂದು 'ಬಂಧು'ವಿಗೆ ಸೇರಿ ವರ್ಷ ಎರಡಾದುವು. ಈ ಸಂಪಾದಕರ ಸೇವೆಗೆ ತಲೆಕೊಟ್ಟು ಮನೆಮಾರಿಲ್ಲದಂತಾಯಿತು. ಸಂಪಾದಕರೇನೋ ಸಾಲಮೂಲವಿಲ್ಲದೆ ಪತ್ರಿಕೆಯನ್ನು ನಡೆಸಿದ್ದಾರೆಂದು ಬರೆಯುತ್ತಿದ್ದಾರೆ! ಇವರ ಮಟ್ಟಿಗೆ ಇದು ನಿಜ. ಆದರೆ ನನ್ನ ಮಟ್ಟಿಗೋ, ನನ್ನ ಒಳಗಿನ ಗುಟ್ಟು ಶಿವನೇ ಬಲ್ಲ. ಇದ್ದ ಬದುಕು ಹೋಗಿ ಭಿಕಾರಿಯಾಗಿದ್ದೇನೆ. ಇದ್ದವರ ಗುಟ್ಟನ್ನು ಹೊರಡಿಸಿ ಶಾಪ ಪಡೆದಿದ್ದೇನೆ. ಕೆಲವರು ನಾನು ಸಂಪಾದಕನೇ ಅನ್ನುತ್ತಾರೆ. ಕೆಲವರು ನಾನು ಮೈಸೂರಿನ ಮಗ ಎನ್ನುತ್ತಾರೆ. ಆದರೆ, ನಾನು ಮಾತ್ರ ನಾನೇ ಆಗಿದ್ದೇನೆ. ಇಲ್ಲಿಯವನೂ ಅಲ್ಲ,—ಅಲ್ಲಿಯವನೂ ಅಲ್ಲ! ವಾಚಕರವನೇ ಆಗಿದ್ದೇನೆ. ಈ ಎರಡನೆಯ ವರ್ಷದ ಕೊನೆಯ ತಿಂಗಳಲ್ಲಿ ನಾನು ನನ್ನ ಕೊನೆಯ ನಮಸ್ಕಾರವನ್ನು ಕೊಡಲು ಬಂದಿದ್ದೇನೆ. ಕೊನೆಯದೇಕೆ? ಗೊತ್ತೇ? ಕಳೆದ ವಾರ ಸಂಪಾದಕರು ನನ್ನ ವಿಷಯವಾಗಿ-ನಾನು ಬೇಕೋ ಬೇಡವೋ ಎಂಬ ಕುರಿತಾಗಿ-ನಿಮ್ಮ ಓಟು ಕೇಳಿದರಷ್ಟೆ! ಎಲ್ಲರೂ ನಾನು ಬೇಕು-ಬೇಕು ಎಂದು ಬೊಬ್ಬಿಟ್ಟರು; ಪತ್ರಾ ಬರೆದರು. ಈ ಸುಸಂದರ್ಭವನ್ನು ಕಂಡು ನಾನು ಸಂಪಾದಕರೊಡನೆ "ಸ್ವಾಮೀ, ಮನೆಮಾರು ಕಳೆದುಕೊಂಡೆ; ನನಗೆ ೩ನೇ ವರ್ಷದಿಂದ ೩೫ ರೂಪಾಯಿ ಸಂಬಳ ಕೊಡಬೇಕು' ಎಂದೆ. ಅದಕ್ಕೆ ಸಂಪಾದಕರು, "ಕನ್ನಡ ಪತ್ರಿಕೆ ಇದು; ಜಾಹೀರಾತುಗಳನ್ನು ಕೊಡುವವರೇ ಇಲ್ಲ, ಕಾಸು ಕೊಡುವವರಿಲ್ಲ. ಚಂದಾ ಹಣವೇ ಸರಿಯಾಗಿ ಕೊಡುವುದಿಲ್ಲ. ವಿ. ಪಿ. ಹಿಂದೆ ಬಿಡುವವರ ಜಾತಿ ಹೆಚ್ಚಾಗಿದೆ. ಸಹಾಯಾರ್ಥ ನಾಟಕ ಆಡಿಸಿದರೂ, ನಾಟಕ ನೋಡಿ ಹಣಕೊಡದೆ ತಪ್ಪಿಸುವವರು ಬಹಳ. ಪತ್ರಿಕೆಗಳಿಗೆ ಪಕೆಟು ತೆರೆಯುವರು ಕಡಿಮೆ. ಆದುದರಿಂದ ಸಂಬಳಕೊಡಲು ಸಾಧ್ಯವಿಲ್ಲ; ಬೇಕಾದರೆ ದಿನಕ್ಕೆ ಒಂದಾಣೆ ಕಾಫಿ ಕುಡಿಯಲು ತೆಗೆದುಕೊಳ್ಳಿ" ಎಂದರು. ಇದನ್ನು ಕೇಳಿ ನಾನು ಸಹಿಸುವೆನೇ? "ಹಾಗಾದರೆ ನಾನು ಊರಿಗೆ ಹೋಗುವೆನು. ನಿಮ್ಮ ಕೆಲಸ ಬೇಡ." ಎಂದೆ. ಒಪ್ಪಿದರು ಸಂಪಾದಕರು. ಆದರೂ ನೋಡಿ, ನನಗೆ ಬಡವರ ಬಂಧುವನ್ನು ನಿಮ್ಮಂತೆ ಬಿಟ್ಟು ಬಿಡಲು ಇಚ್ಛೆಯಿಲ್ಲ.



ಅದಕ್ಕಾಗಿ ನನ್ನ ಅಳಿಯ 'ಧೂಮಕೇತು'ವನ್ನು ಬರುವ ವರ್ಷದಿಂದ ಕಳುಹಿಸುತ್ತೇನೆ. ಅವನು ನನ್ನ ಸ್ಥಾನದಲ್ಲಿರಲಿ ಎಂದೆ; ಒಪ್ಪಿದರು ಸಂಪಾದಕರು. ಬರುವ ವರ್ಷದಿಂದ ನನ್ನ ಅಳಿಯ ಧೂಮಕೇತುವು "Comet's Comments" ಎಂದು ಪ್ರಾರಂಭಿಸುವನು. ಸ್ವಾಮೀ, ವಾಚಕರೇ, ನಿಮ್ಮನ್ನೆಲ್ಲ ಬಿಡಲು ನನಗೆ ಬಹಳ ದುಃಖವಾಗುತ್ತದೆ, ಕ್ಷಮಿಸಬೇಕು. ಆದರೆ ಈ ದುಃಖದ ವೇಳೆ ಮೈಸೂರನ್ನು ನೆನೆಯುವಾಗ, ಹೆಂಡತಿಯ ರೂಪು ಎದುರು ನಿಂತಂತಾಗಿ ಬಹಳ ಸಂತೋಷವಾಗುತ್ತದೆ. **ಬರುವ ತಿಂಗಳಲ್ಲಿ ಅಂದರೆ 1934ನೇ ಜುಲಾಯಿಯಲ್ಲಿ ಬಡವರ ಬಂಧು ಪ್ರಕಟವಾಗುವುದಿಲ್ಲವೆಂದು ನಿರ್ಧರಿಸಿದ್ದಾರೆ. ಒಂದು ವರ್ಷ ದುಡಿದುದಕ್ಕೆ ೧ ತಿಂಗಳು ರಜೆಯಂತೆ.** ಇದನ್ನು ನೋಟ್ ಮಾಡಿಕೊಳ್ಳಿ. ಅಲ್ಲದೆ "ನಮಗೆ ಜುಲಾಯಿ ಸಂಚಿಕೆ ಸಿಗಲಿಲ್ಲ" ಎಂದು ಕಾಗದ ಬರೆಯಬೇಡಿ, ಜೋಕೆ! ಮೈಸೂರಿಗೆ ಹೋಗಿ ಮಂಗಳೂರಿಗೆ ಆದಷ್ಟು ಬೇಗನೇ ಬರಬೇಂಕೆಂದಿದ್ದೇನೆ (ಆದರೆ ಅಲ್ಲಿ ತೀರಿ ಕೊಂಡರೆ ನಾನು ಜವಾಬ್ದಾರನಲ್ಲ) ಧೂಮಕೇತುವು ಬರುವ ವರ್ಷ ಡಿಸ್ಟ್ರಿಕ್ಟ್ ಬೋರ್ಡು, ಪೋಲೀಸ್ ಆಫೀಸು, ಮುನಿಸಿಪಾಲಿಟಿ, ಹಜೂರಾಫೀಸು, ಪೋಲೀಸ್ ಸ್ಟೇಶನ್, ಇನ್‌ಕಮ್‌ಟೇಕ್ಸ್ ಆಫೀಸು, ಮೊದಲಾದ ಕಡೆ ಹೋಗಿ ತನ್ನ ಕಮ್ಮೆಂಟ್ಸನ್ನು ಬರೆವನಂತೆ. ಜಾಗ್ರತೆ! ಅವನ ಬಾಯಿಗೆ ಬೀಳಬೇಡಿ.

ಇಂತು, ಗುಡ್‌ನೈಟ್.

ವಿಮರ್ಶೆ

ಜಯಕರ್ನಾಟಕ—ಸಂಪಾದಕರು—ಶ್ರೀಯುತ ಬೆಳಗಾಂವಿ ರಾಮಚಂದ್ರ ರಾಯರು. ಕನ್ನಡ ಪ್ರಪಂಚದಲ್ಲಿ ಅಗ್ರಸ್ಥಾನವನ್ನು ಪಡೆದಿರುವ ಮಾಸಪತ್ರಿಕೆಯೆಂದರೆ ಇದೇ ಈ ಜಯಕರ್ನಾಟಕ. ಇದರಲ್ಲಿ ಪ್ರಸಿದ್ಧ ಲೇಖಕರಿಂದ ಬರೆಯಲ್ಪಟ್ಟ ಉತ್ತಮ ಲೇಖನಗಳೇ ಪ್ರಕಟವಾಗುತ್ತವೆ. ಸಂಪಾದಕರುಗಳಿಗೆ ಕನ್ನಡಿಗರೆಲ್ಲರೂ ಕೃತಜ್ಞರಿರತಕ್ಕದ್ದಲ್ಲದೆ ಮುಂದಿನ ಅದರ ನಡೆಯುವಿಕೆಗೆ ಕೈಯನ್ನೂ ಕೊಡುವುದು ಕರ್ತವ್ಯವಿದೆ. ದೇಶದವರಿಗೆ ವಾರ್ಷಿಕ ಚಂದಾ ರೂ. ೮—೦

ಪರದೇಶದವರಿಗೆ ರೂ. ೭—೮ ೦.

ಜಯಕರ್ನಾಟಕ ಆಫೀಸು, ಧಾರವಾಡ.

ಕಾವ್ಯಸಾಮ್ರಾಜ್ಯ—ಇದು ಉಡುಪಿಯ ಕಿರಿಯರ ಪ್ರಪಂಚದ ತೊದಲ್ನುಡಿ ಗ್ರಂಥಮಾಲೆಯ ೫ನೇ ಪುಷ್ಪ. ಇದು ಅಖಿಳ ಕರ್ನಾಟಕದ ಮೂವತ್ತೈದು ಪ್ರಸಿದ್ಧ ಕವಿಗಳಿಂದ ಬರೆಯಲ್ಪಟ್ಟ ನಲ್ವತ್ತು ಕವಿತೆಗಳೊಡನೆ ಶ್ರೀ ಬಿ ಎಂ. ಶ್ರೀಕಂಠಯ್ಯನವರ ಮುನ್ನುಡಿಯೊಂದಿಗೆ ಪ್ರಕಟವಾಗಿದೆ. ಕಿರಿಯರ ಪ್ರಪಂಚದವರಿಂದ ಇಂದಿನ ತನಕ ಪ್ರಕಟಿಸಲ್ಪಟ್ಟ ಹೊತ್ತಿಗೆಗಳಿಗಿಂತ ಇದೀಗ ಈ "ಕಾವ್ಯಸಾಮ್ರಾಜ್ಯ"ವು ಹೆಚ್ಚು ಭಾರವುಳ್ಳದ್ದಾಗಿದೆ. ಈ ಸಾಮ್ರಾಜ್ಯದಲ್ಲಿ ಆಳಿನಿಂದ ಹಿಡಿದು ಅರಸನ ವರೆಗಿನವರೂ ಇದ್ದಾರೆ ಕನ್ನಡ ಕವಿಗಳೆಲ್ಲ ಒಂದುಗೂಡಿದ್ದಾರೆ. ಮುನ್ನುಡಿಯಲ್ಲಿ ಬರೆದಿರುವಂತೆ ರಸ ಪ್ರಸಾದ, ಪ್ರಕೃತಿಯ ಚೆಂದ, ನಲ್ಲೆಯ ಒಲುಮೆ, ತಾಯಿಸೇವೆ, ವೀರಗನಸು, ಭಕ್ತಿಯ ದುಡಿತ, ದಯೆ, ವಿಶ್ವದೊಕ್ಕಟ್ಟು, ಹೊಸ ಹುಟ್ಟಿನ ಹೊಸ ಸೃಷ್ಟಿಯ ಹೆಮ್ಮೆ - ಇವೆಲ್ಲವನ್ನೂ ಒಂದೇ ಕಡೆಯಲ್ಲಿ ಕೂಡಹಾಕಿದಂತಿದೆ. ಇವರಲ್ಲಿನ ಶ್ರೀ ಕೆ. ಶಂಕರ ಭಟ್ಟರಿಂದ ಬರೆಯಲ್ಪಟ್ಟ 'ಕಹಳೆ' ಎಂಬ ಕವಿತೆಯು ಯುವಕರನ್ನೊಮ್ಮೆ ಹುರಿದುಂಬಿಸದಿರದು. ಕವಿಗಳು ಹುರುಪುಗೊಂಡು—

ಇಂದಿನಾವೇಶವಿದು! ಹಿಂದಿನಾ ಪರಿಯಿಲ್ಲ;
ಒಡೆತನಕೆ ತಲೆಬಾಗಿ ಮುರುಟಲಿಹುದಲ್ಲ;
ರಾಜಪದ ಪೀಠಕ್ಕೆ ಹಣೆಯ ಹಚ್ಚುವುದಲ್ಲ;
ಒಡೆತಕ್ಕೆ ಮೈಚಾಚಿ ಹುಡಿಯಪ್ಪುದಲ್ಲ.

ಎಂದೆಲ್ಲಾ ಬಹು ಸೊಗಸಾಗಿ ವಿವರಿಸಿರುವರು.

"ತರುಣರ ದಸರೆ"ಯಲ್ಲಿ ಶ್ರೀ ದಿನಕರ ದೇಸಾಯಿಯವರು—

ಹಿಂದಿನ ಕಾಲವು ಹಿಂದಕೆ ಅನ್ನಿ,
ಮುಂದಿನ ಕಾಲವು ನಮ್ಮೆಂದೆ,

\+ \+ \+ \+ \+

ಮುದುಕರು ನಿಲ್ಲಲಿ ತುಸು ಹಿಂದೆ
ಹುಡುಗರ ಸಾಹಸ ಏನೆಂಬೆ.
ಮುದುಕರು ಪಾಪ! ಕಂಗಳು ಮಂದ
ಮುಂದಿನ ನೋಟವ ನೋಡಲು ಅಂಧ,

\+ \+ \+ \+ \+

'ಹಳೆಯದು' ಎಂದು ಕುಳ್ಳಿರಬೇಡಿ;

\+ \+ \+ \+ \+

ಹಿಂದಿನ ಕಾಲದ 'ರೂಢಿ'ಯು ಸಾಕು.
ಹಿರಿಯರದೆಲ್ಲವು ಬಲು ಚೆನ್ನ,
ಆದರೆ ಏನೈ! ಆ ಚಿನ್ನ,
ಅವರೊಂದಿಗೆ ಕೂಡಿದೆ ಮಣ್ಣ,

ಎಂದು ವಿಚಾರರಾಗದೊಡನೆ ಭಾವಭರಿತರಾಗಿ ಹಾಡಿದ್ದಾರೆ.

"ಯಾವ ಕಾಲದ ಶಾಸ್ತ್ರವೇನು ಹೇಳಿದರೇನು?" ಎಂಬ ಕವಿತೆಯಲ್ಲಿ ಶ್ರೀ ಕೆ. ವಿ. ಪುಟ್ಟಪ್ಪನವರು ನಿಜಧರ್ಮವನ್ನು ಹೇಗೆ ಸಾರುವರೆಂಬುದನ್ನು ಈ ಸಂಚಿಕೆಯ ಎದುರು ಬೈಂಡಿನಲ್ಲಿ ನೋಡಿರಿ.

"ದೀನರಿಗಿಂತ ದೇವ ಬಡವ" ಎಂಬ ಕವಿತೆಯಲ್ಲಿ ಶ್ರೀ ದಿನಕರ ದೇಸಾಯಿಯವರು ದೀನ—ದೇವನ, ಸ್ಥಾನವನ್ನು ಹೇಗೆ ಹೇಗೆ ನಿರ್ಮಿಸಿರುವರೆಂಬುದನ್ನು ಈ ಸಂಚಿಕೆಯ ಪ್ರಥಮ ಪುಟದಲ್ಲಿ ನೋಡಿರಿ

ಶ್ರೀ ಎಂ. ಆರ್. ಶ್ರೀನಿವಾಸ ಮೂರ್ತಿಯವರು ಹೆಂಡತಿಯಿಂದ ಗಂಡನಿಗೆ "ಒಂದು ಕಾಗದ" ಬರೆಸಿ, ಹಾಳು ಸಮಾಜವನ್ನು ಸದ್ದಾರಿಗೆ ತರುವ ಪ್ರಯತ್ನ ನಡೆಸಿದ್ದಾರೆ.

ಇನ್ನುಳಿದ ಹೆಚ್ಚಿನ ಕವಿತೆಗಳ ಸವಿಯಣ್ಣುನ್ನಬೇಕಾದರೆ ಕಾವ್ಯಸಾಮ್ರಾಜ್ಯವನ್ನೇ ಹೊಕ್ಕಿ ನೋಡಬೇಕು; ತರಿಸಿ ಓದಬೇಕು. ಈ ಸರ್ವ ಶ್ಲಾಘನೀಯ ಯತ್ನವನ್ನು ಪ್ರೋತ್ಸಾಹಿಸದಿದ್ದರೆ ಮತ್ತಾವುದನ್ನು?

ಬೆಲೆ ರೂ. ೦—೧೨—೦.

ಕಾರ್ಯದರ್ಶಿ, ಕಿರಿಯರ ಪ್ರಪಂಚ, ಉಡುಪಿ.

Zenith Life Assurance Co., Ltd., Directors' Report, Revenue Account and Balance Sheet for the year ending 31st December 1933.

ಇದರ ೧೯೩೩ರ ವರದಿಯು ಹಸ್ತಗತವಾಗಿದೆ. ಇದರ ಈ ಕೆಳಗಿನ ಬೆಳವಣಿಗೆಯನ್ನು ಕಂಡು ಸಂತೋಷಗೊಳ್ಳಬೇಕಾಗಿದೆ.

ದೊರೆತ ಹೊಸ ವಹಿವಾಟು ರೂ. ೩೩,೫೯,೫೦೦. ೧೪೮೩ ಹೊಸ ಪೊಲಿಸಿಗಳಿಂದ ರೂ. ೨೭,೬೫,೦೦೦. ಪ್ರಿಮಿಯಂ ಸಂಪಾದನೆ ರೂಪಾಯಿ ೪೯೧,೬೨೨. ಒಟ್ಟು ಸಂಪಾದನೆ ರೂ. ೫,೪೪,೫೨೨. ಮರಣಗಳ ಬಗ್ಗೆ ತೆತ್ತುದು ರೂ. ೭೯,೬೪೪. ಈ ವರ್ಷ ಹೆಚ್ಚಿದ ವ್ಯಾಪಾರ ರೂ. ೧,೬೦,೨೩೬. ಸರಕಾರೀ ಠೇವಣಾತಿ ರೂ. ೧೦,೫೬,೫೭೭ ಆಸ್ತಿ ರೂ. ೧೩,೧೪,೬೭೫.

೧೯೧೬ರಲ್ಲಿ ಬರೀ ರೂ. ೪೩೦೭ರಷ್ಟು ಲಾಭ ಸಂಪಾದಿಸಿದ ಈ ಕಂಪೆನಿಯು ೧೯೩೩ರಲ್ಲಿ ೫,೪೪,೫೨೨ರಷ್ಟು ಲಾಭ ಸಂಪಾದಿಸಲು ಸಮರ್ಥವಾದುದನ್ನು ನೋಡಿ ಈ ಕಂಪೆನಿಯನ್ನು ಅಭಿವಂದಿಸಲೇಬೇಕಾಗಿದೆ

ಗೋಮಟೇಶನಿಗೆ

೧


ಕಾರ್ಕಲ್ಲ ಮೂರುತಿಯೆ
ಕಗ್ಗಲ್ಲ ಕಾವ್ಯವೇ!
ಸ್ಫೂರ್ತಿ ಹರಿದುಕ್ಕಿಸುವ ನಿನ್ನ ರೂಪ
ಏಕಲ್ಲೆ ನಿಂದಿರುವೆ–ಯಾರ
ಶಾಪ?

೨

ನಿನ್ನ ಚಿತ್ರಿಸಿದವನು
ಆವ ಶಿಲ್ಪಿಯೊ! ಆವನು
ನಿನ್ನ ರೂಪವನೆಂತು ಚಿತ್ರಿಸಿದನೊ!
ಕಗ್ಗಲ್ಲ ಕವನಕವ ಮೊದ
ಲಾದನೊ!

೩

ಏನು ಶಾಂತಿಯೊ! ಮೌನ
ವೇನೊ ನಿನ್ನದು! ನಿನ್ನ
ಕಂಡವರ ಹೃದಯದಲಿ ಕಾವ್ಯವುದಿಸಿ–
ಹೊರಹೊಮ್ಮುತಿರುತಿಹುದು–
ಯಾರು ಬರೆಸಿ?



೪

ನಿನ್ನ ಆಕೃತಿ ಕಂಡು
ನರರುಂಡು ಸವಿಬಂಡು
ಶಾಂತಿಯನು ಮೌನವನು ಕೊಂಡಿರು
ವರು!
ಇನ್ನೆಲ್ಲಿ ಈ ನೆಲದಿ ಸುಖ ಪಡೆವರು?

೫

ಕಲ್ಲ ಮೂರುತಿಯಲ್ಲ
ಕಲೆಯ ಮೂರುತಿ ನೀನು
ಕಂಡವರ ಹೃದಯದಲಿ ನವ ಕಲೆಯನು
ಬೆರೆಸಿ ಹೊರಹೊಮ್ಮಿಸುವೆ
ಕವನಗಳನು!!

೬

ಪ್ರಾಣಮೂರ್ತಿಯು ನಿನ್ನ
ಸ್ಥಿರಮೂರ್ತಿಯೊಳು ನೆಲೆಸಿ
ದೊಡೆ ಸೊಗಸೆ– ಕೇಳುವವರಾರು ನಿನ್ನ?
ಇಂದಿರುವ ಗೌರವವು ತೊಲಗಿ
ಮುನ್ನ...

೭

ಕೇಳುವವರಾರಿಹರು?
ಜೋಳ್ಕೊಡುವ ಜನರಾರು?
ಕಾರ್ಕಲ್ಲ ಗೋಮಟೇಶ್ವರನೆ ನೀನು–
ಗೌರವದಿ ಅಲ್ಲೆ ಇರೆ–ದೇವ ನೀನು!!

ಯಂ. ಗೋಪಾಲಕೃಷ್ಣರಾವ್, ಗುತ್ತಿಗಾರು.

Reg. No. M. 2771. "ಬಡವರ ಬಂಧು" 'Badavara Bandhu' Mangalore

Government Soap Factory

BANGALORE.

ವಿಶ್ವಾಸಾರ್ಹತೆ.

ಅತ್ಯುಚ್ಚವಾದ ಟೊಯಿಲೆಟ್ ಸಾಬೂನಿನಲ್ಲಿ ಏನೆಲ್ಲ
ಗುಣಗಳು ಆವಶ್ಯಕವೆಂದು ನೀವು ತಿಳಿಯುತ್ತೀರೋ
ಆ ಗುಣಗಳೆಲ್ಲಾ

ಮೈಸೂರು ಸೇಂಡಲ್ ಸಾಬೂನಿನಲ್ಲಿವೆ.

ನಾವು ನಿಮಗೆ ಭರವಸೆಯನ್ನೀಯುತ್ತೇವೆ.

ಎಲ್ಲಾ ಕಡೆಗಳಲ್ಲೂ ದೊರೆಯುತ್ತದೆ.

ಗವರ್ನಮೆಂಟ್ ಸೋಪ್ ಫೆಕ್ಟರಿ,

ಬೆಂಗಳೂರು.

Printed by V. S. Kudva at the Sharada Press, Mangalore and published by Mangalore Jarappa
at the Badavara Bandhu Office, Hampankatta Mangalore.